ಇದೆಯೇ ಎಂದು ನೋಡಿದಾಗ ಅದು ನನಗೆ ಗೊತ್ತಾಗಲೇ ಇಲ್ಲ. ನನ್ನ ಜೊತೆಯಲ್ಲಿ ಇದ್ದವರು ನಿಧಾನವಾಗಿ ನೋಡಿ ಈ ಮೂಲೆಯಲ್ಲಿ ರಿಗ್ರೆಟ್ ಕಾಲಂನ್ನು ಹಾಕಿದ್ದಾರೆಂದು ತೋರಿಸಿದರು. ನಮ್ಮ ಚಾರಿತ್ರ್ಯದ ಹರಣ ಮಾಡುವುದಕ್ಕೆ ಏನು ಬರೆಯುತ್ತಾರೋ, ಅದನ್ನು ಅವರು ಗೊತ್ತಿಲ್ಲದೆ ಬರೆದರೆಂದು ಇಟ್ಟುಕೊಳ್ಳೋಣ. ಆ ತಿದ್ದುಪಡಿಯನ್ನು ಅಷ್ಟೇ ದಪ್ಪ ಅಕ್ಷರದಲ್ಲಿ ಅದೇ ಪೇಜಿನಲ್ಲಿ ಅವರು ಬರೆಯಬೇಕಲ್ಲವೇ? ಜೊತೆಗೆ there are some yellow journals spreading disinformation. ಎಲ್ಲ ಜರ್ನಲ್ಸ್ ಅಲ್ಲ. ಪತ್ರಿಕೆಯಲ್ಲಿ ಏನೇನೋ ಬರೆದುಬಿಡುವುದು. ನಾವು ಏನು ಮಾಡುತ್ತೇವೆಂದರೆ-ಅಯ್ಯೋ ಈ ಮೂರು ಕಾಸಿನ ಪತ್ರಿಕೆಯವರು ಬರೆದರೆ ಬರೆಯಲಿ ಎಂದು ಕೆಲವರು ಹೇಳುತ್ತಾರೆ. ಆದರೆ ಇದು ಏನಾಗುತ್ತದೆ ಎಂದರೆ whatever is printed on the paper in the form of a newspaper, the ordinary man will believe. So, there should be a law to take care of such journals voluntarily. If need be, there should be a law to prohibit the publication of such journals. It is not very difficult for the government to know. ನಾನು ಈ ದೊಡ್ಡ ದೊಡ್ಡ ದಿನಪತ್ರಿಕೆಗಳಲ್ಲಿ ಹೇಳುತ್ತಿಲ್ಲ. There are yellow journals. ವ್ಯಕ್ತಿ ಚಾರಿತ್ರ್ಯ ಹರಣ ಮಾಡುವುದಕ್ಕೆ ಹುಟ್ಟಿಕೊಂಡವು, ಕೆಲವು ಬ್ಲಾಕ್‌ಮೇಲ್ ಮಾಡುವುದಕ್ಕೆ ಹುಟ್ಟಿಕೊಂಡವು. ಯಾರೋ ಮಂತ್ರಿ ಹತ್ತಿರ ಹೋಗಿ ಏನೋ ಕೇಳುವುದು, ಅವರು ಕೊಡಲಿಲ್ಲವೆಂದರೆ ಸರಿ, ನಾಳೆ ಹೋಗಿ ಇವರ ವಿರುದ್ಧ ಏನಾದರೂ ಸುಳ್ಳು ಸೇರಿಸಿ ಬರೆದು ಬಿಡುವುದು. ಹೋಗುವುದಾದರೆ ಕೋರ್ಟಿಗೆ ಹೋಗಿ, ನನಗೆ ಗೊತ್ತಿರುವ ಹಾಗೆ ಒಂದು ಪತ್ರಿಕೆ ಮೇಲೆ 15-20 ಕೇಸುಗಳು ಇವೆ. ಆ ನಂತರ British poet Humbert Wolfe ಅವರು ಈ ಜರ್ನಲಿಸಂ ಬಗ್ಗೆ ಒಂದು ಸ್ಟಾಂಜ ಬರೆಯುತ್ತಾರೆ. "You cannot hope to bribe or twist. Thank God! the British Journals. ಅದಕ್ಕೆ ಅವರು ಬರೆಯುತ್ತಾರೆ:"But seeing what the man will do, unbribed there is no occasion to bribe."ಎಂದು ಹೇಳುತ್ತಾರೆ. ಲಂಚ ಕೊಡದೆಯೇ ಏನೇನು ಕೆಟ್ಟದಾಗಿ ಬರೆಯಬಹುದು ಅದೆಲ್ಲ ಬರೆಯುವಾಗ ಇನ್ನು ಲಂಚ ಕೊಡುವ ಅವಶ್ಯಕತೆಯಾದರೂ ಇನ್ನೆಲ್ಲಿ ಬರುತ್ತದೆ. ಇದು ಪ್ರೆಸ್‌ಗೆ ಇರುವ ಸ್ವಾತಂತ್ರ್ಯ ಬೇರೆ. ಪ್ರೆಸ್ ಬಿಲ್ ತಿಂದರು. ಪಟೇಲರೇ, ಇದು ತಮಗೂ ಗೊತ್ತಿರಬಹುದು. I called that as a legislative terrorism. They brought the Press Bill.ಲೋಕಸಭೆಯ ಪಾಸ್ ಆಗಿ ಹೋಯಿತು. ಆಗ ನಾನು ಇರಲಿಲ್ಲ. ನಂತರ ಇದ್ದಕ್ಕಿದ್ದ ಹಾಗೆ ಪ್ರಾರಂಭ ಮಾಡಿಬಿಟ್ಟರು. I made it an issue.ರಾಜ್ಯಸಭೆಯಲ್ಲಿ ವಿಥ್‌ಡ್ರಾ ಮಾಡಿಕೊಂಡರು. It snowballed into a very big protest. But I took such a big step. I called it a legislative terrorism. ಪತ್ರಿಕಾ ಸ್ವಾತಂತ್ರ್ಯ ಬೇರೆ, ಪತ್ರಿಕಾ ಸ್ವೇಚ್ಛಾಚಾರ ಬೇರೆ. ಪತ್ರಿಕಾ ಸ್ವಾತಂತ್ರ್ಯ ಇದ್ದುಕೊಳ್ಳಲ್ಲಿ. ಆದರೆ ಪತ್ರಿಕಾ ಸ್ವೇಚ್ಛಾಚಾರವನ್ನು ನಾವು ಕಂಟ್ರೋಲ್ ಮಾಡಬೇಕಾಗುತ್ತದೆ. I want to make a distinction between these two. ಅದಕ್ಕೆ ಏನು ಇದೆ ಈಗ to curb this ಸ್ವೇಚ್ಛಾಚಾರ licence not freedom, ಪ್ರೆಸ್ ಕೌನ್ಸಿಲ್ ಒಂದು ಇದೆ. ಇವೊತ್ತು ಪ್ರೆಸ್ ಕೌನ್ಸಿಲ್‌ಗೆ ಏನು

ಅಧಿಕಾರ ಇದೆ? ಅಬ್ಬಬ್ಬಾ ಎಂದರೆ ರಿಗ್ರೆಟ್ ಅಪಾಲಜಿ ಪಬ್ಲಿಷ್ ಮಾಡಬಹುದು. ಏನಾದರೂ ಆದರೆ ಪ್ರೆಸ್ ಕೌನ್ಸಿಲ್‌ಗೆ ದೂರು ಕೊಡಿ ಎಂದು ಹೇಳುತ್ತಾರೆ. ಅದೂ ಡೆಲಿಬರೇಟ್ ಆಗಿ ದೂರುಗಳನ್ನು ಕೊಟ್ಟುಕೊಂಡು ಅವರು ವಿಚಾರಣೆಯನ್ನು ನಡೆಸಬೇಕು. ವಿಚಾರಣೆಯನ್ನು ನಡೆಸುವುದರಲ್ಲಿ ಒಬ್ಬ ನ್ಯಾಯಾಧೀಶರೂ ಇರುತ್ತಾರೆ, ಪತ್ರಿಕಾರಂಗದವರು ಇರುತ್ತಾರೆ. Atleast Press Council should be given more powers to curb this licence not freedom. ಈ ಸ್ವೇಚ್ಛಾಚಾರ ತಡೆಯುವುದಕ್ಕೆ ಪ್ರೆಸ್ ಕೌನ್ಸಿಲಿಗ್ ಹೆಚ್ಚು ಅಧಿಕಾರವನ್ನು ಕೊಡಬೇಕು. because it is an important pillar of our democracy, our system. They have to educate people. They have no right to spread disinformation. Whatever they do it, it should be educative, helpful to our system; our society... ಏನೋ ಟಾರ್ನಿಸ್ ಮಾಡಿ ಸುಳ್ಳು ಇಮೇಜ್ ಮಾಡಿ ಪ್ರಾಜೆಕ್ಟ್ ಮಾಡತಕ್ಕಂಥದ್ದು ಅಲ್ಲ they have got a major responsibility the highest responsibility in any in any sensitive democratic country is on the press.

MR. SPEAKER: It this with reference to reporters?

SRI H.N. NANJEGOWDA: There is one more trend in India...

ಶ್ರೀ ಮಲ್ಲಿಕಾರ್ಜುನ ಖರ್ಗೆ. ಮಾನ್ಯ ನಂಜೇಗೌಡರು ಜ್ಯುಡಿಷಿಯಲ್ ಹೇಗೆ ಇರಬೇಕು ಆದರ ಆ್ಯಕ್ಟಿವಿಸಂನ್ನು ಬಗ್ಗೆನೂ ಮಾತನಾಡಿದರು. ಇದು ಒಳ್ಳೆಯದು. ಅವರಿಗೂ ಕೂಡ ಒಂದು ಇದೆ. ನಮ್ಮ ಸಂವಿಧಾನದ ಪ್ರಕಾರವಾಗಿ ಅವರುಗಳು ಹೇಗೆ ನಡೆದುಕೊಳ್ಳಬೇಕು ಎನ್ನುವುದರ ಬಗ್ಗೆ. ಆಮೇಲೆ ಐ.ಎ.ಎಸ್. ಅಧಿಕಾರದ ಬಗ್ಗೆ ಹೇಳಿದರು. ಈ ಪ್ರೆಸ್ ಬಗ್ಗೆ ಹೇಳುತ್ತಿದ್ದಾರೆ. ಆದರೆ ಇಲ್ಲಿಯವರೆಗೆ ಸರ್ಕಾರ ಹೇಗೆ ನಡೆದುಕೊಳ್ಳಬೇಕೆಂದು ಹೇಳಲೇ ಇಲ್ಲ. ಜ್ಯುಡಿಶಿಯಂ ಬಗ್ಗೆ ಹೇಳಿದ್ದಾರೆ ಅದನ್ನು ನಾನು ಒಪ್ಪಿಕೊಂಡೆ ಸಂವಿಧಾನ ಯಾವ ರೀತಿಯಲ್ಲಿರಬೇಕು, ಯಾವ ದಿಕ್ಕಿನಲ್ಲಿ ಇರಬೇಕು, ನಮ್ಮ ಸ್ವಾತಂತ್ರ್ಯ. ಯಾವ ರೀತಿಯಲ್ಲಿ ಇರಬೇಕು, ಫಂಡಮೆಂಟಲಿ ರೈಟ್ಸ್ ಹೇಗೆ ಇರಬೇಕು, ಪ್ರೆಸ್ ಹೇಗೆ ಇರಬೇಕು, ಲೆಜಿಸ್ಲೇಚರ್ ಹೇಗೆ ಇರಬೇಕು, ಅವರು ಹೇಗೆ ಇರಬೇಕೆಂದು ಸ್ವಲ್ಪ ಏನಾದರೂ ಹೇಳಿದರೆ, ಹೇಳಬೇಕಲ್ಲ, ನಿಮ್ಮ ಮಾತಿನಲ್ಲಿ ಕೇಳೋಣ, ಎಲ್ಲರಿಗೂ ಅನುಕೂಲ ಆಗಲಿ.

ಶ್ರೀ ಸಿ.ಹೆಚ್. ವಿಜಯಶಂಕರ್: ಮಾನ್ಯ ಸಭಾಧ್ಯಕ್ಷರೆ, ಅದಕ್ಕೇ ಚುನಾವಣೆ ವ್ಯವಸ್ಥೆ ಎಂದು ಇರುವುದು ಅದನ್ನು ಜನಗಳು ಹೇಳುತ್ತಾರೆ.

ಅಧ್ಯಕ್ಷರು: ನಾನು ಏನು ಹೇಳುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇನೆಂದರೆ, 1947ರ ಸ್ವಾತಂತ್ರ್ಯದ ಪೂರ್ವ ಮತ್ತು ನಂತರ ಸುಮಾರು 15-20 ವರ್ಷಗಳ ಕಾಲ ನಮ್ಮ ಪತ್ರಿಕೆಗಳ ಯಜಮಾನರುಗಳು ಯಾರು ಇದ್ದರು ಅವರು ಎಡಿಟರ್ಸ್ ವಿಚಾರಕ್ಕೆ ಬರುತ್ತಿರಲಿಲ್ಲ ಸಂಪಾದಕರೇ

ಪತ್ರಿಕೆಗಳನ್ನು ನಡೆಸುತ್ತಿದ್ದರು. ಮಾಲೀಕರು ಬರುತ್ತಾ ಇರಲಿಲ್ಲ. ಎಡಿಟರ್ ಕಾಲಂಗೆ ಡೈರೆಕ್ಷನ್ ಕೊಡುತ್ತಾ ಇರಲಿಲ್ಲ. ಬಹಳ ಅಪರೂಪ. All big businessmen they have flated their Magazines and Dailies,.... ಅವರು ನ್ಯೂಸ್‌ನ್ನು ಪ್ರಚಾರ ಮಾಡಲಿಕ್ಕೆ, ಅವರಿಗೆ ಬೇಕಾದವರನ್ನು ಪ್ರೊಜೆಕ್ಟ್ ಮಾಡಲಿಕ್ಕೆ ಬೇಡದವರನ್ನು ರಾಜಕೀಯವಾಗಿ ಕೊಲ್ಲುವುದಕ್ಕೆ ಪ್ರಾರಂಭವಾಗಿ ಬಿಟ್ಟಿವೆ. ಅವರ ಡೈರೆಕ್ಷನ್‌ಗೆ ತಕ್ಕಂತೆ ನಡೆದುಕೊಳ್ಳದೇ ಇದ್ದರೆ ಎಡಿಟರ್, ವರದಿಗಾರರುಲ್ಲಿ ಇರುವುದಕ್ಕೆ ಆಗುವುದಿಲ್ಲ. ಮೊದಲು ಪ್ರೆಸ್‌ನಲ್ಲಿರುವವರಿಗೆ ಸಂಬಳವನ್ನು ಎಷ್ಟು ಕೊಡುತ್ತಿದ್ದರು ಆದರೆ ಇವತ್ತು ಎಷ್ಟು ಕೊಡುತ್ತಿದ್ದಾರೆ. ಅವರಿಗೆ ಏನೇನು ಅನುಕೂಲಗಳನ್ನು ಕೊಡುತ್ತಾರೆ. The tentacls, the poisonous tentacls of the business community this country has spread so vulgarily to the faculties which you mentioned just now. They have polluted the entire atmosphere in taking this country for a ride. Invisible hand of the vested interest has deeply entrenched into this faculty also. We cannot fail to take cognizance of this factor. How many number of Magazines have come,... ಒಬ್ಬ ಟಿ.ಎನ್. ರಾಮಚಂದ್ರರವರು ಭೂಬಾಣದಲ್ಲಿ ಬರೆದರೆ ಆಗುತ್ತಿದ್ದಂತಹ ಇಫೆಕ್ಟ್ ಇವತ್ತು ನೂರಾರು ಪತ್ರಿಕೆಗಳು ಬರೆದರೂ ಸಹ ಆಗುತ್ತಾ ಇಲ್ಲ. There is fall in standards, here and there as well,... ಅವರು ಕೆಟ್ಟಿದ್ದಾರೆಂದು ನಾವುಗಳು ಕೆಟ್ಟಿದ್ದೇವೆ. ಮತ್ತು ಲಜ್ಜೆಗೆ ಹೆದರುತ್ತಿದ್ದವರು, ನಾಟಿಕೆಗೆ ಹೆದರುತ್ತಿದ್ದವರು ಹೆಚ್ಚು ಇದ್ದರು. ಇವತ್ತು ನಮಗೆ ನಾಚಿಕೆಯ ಅಭಾವವಾಗಿ ಬಿಟ್ಟಿದೆ.

ಶ್ರೀ ಹೆಚ್.ಎನ್. ನಂಜೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ ಇಷ್ಟಕ್ಕೆ ನಾನು ಸೀಮಿತವನ್ನು ಮಾಡಿಕೊಳ್ಳುತ್ತೇನೆ. ನಾನು ಹೇಳಿರತಕ್ಕಂಥದ್ದನ್ನು ಡೈವರ್ಟ್ ಮಾಡಿಕೊಳ್ಳುವುದಕ್ಕೆ ಇಚ್ಛೆಯನ್ನು ಪಡುವುದಿಲ್ಲ. That is all what I want to say. So, I thank you Sir, I thank all the Members...

+ಶ್ರೀ ಆರ್. ನಾರಾಯಣ (ಬೆಳ್ಳಾವಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ ಹೆಚ್.ಎಸ್. ನಂಜೇಗೌಡರು ಬಹಳ ಚೆನ್ನಾಗಿ ಅನೇಕ ವಿಚಾರಗಳನ್ನು ಹೇಳಿದ್ದಾರೆ ಮತ್ತು ಅದಕ್ಕೆ ನಮ್ಮ ನಾಯಕರೂ ಕೂಡ ಅನೇಕ ವಿಚಾರಗಳನ್ನು ಹೇಳಿದ್ದಾರೆ. ತಾವು ಮಾತನಾಡಿ ಮುಗಿಸುವುದಕ್ಕೆ ಮುಂಚೆ, ಒಂದು ವಿಚಾರದ ಬಗ್ಗೆ ಮಾನ್ಯ ನಂಜೇಗೌಡರ ಅಭಿಪ್ರಾಯವನ್ನು ತಿಳಿಯಬೇಕೆಂದು ಆಸಕ್ತನಾಗಿದ್ದೇನೆ. 50 ವರ್ಷಗಳ ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ಕೆಲವು ಏರಿಯಾದಲ್ಲಿ ರೀಥಿಂಕ್ ಆಗಬೇಕೆಂದು ಹೇಳಿದ್ದಾರೆ. ನನ್ನ ಪ್ರಾಮಾಣಿಕ ಅನಿಸಿಕೆಯಲ್ಲಿ 50 ವರ್ಷದ ಅನುಭವದ ಹಿನ್ನೆಲೆಯಲ್ಲಿ ಇನ್ನು ಮುಂದೆ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗಬೇಕೋ ಬೇಡವೋ ಎನ್ನುವುದರ ಬಗ್ಗೆ ನನ್ನ ಮೂಲ ಪ್ರಶ್ನೆ whether this country fit for further ruled by democracy,... ಮತ್ತು ಆಡಳಿತ ವ್ಯವಸ್ಥೆ ಬಹಳ ಪ್ರಮುಖರಾದುದು ಅದರ ಬಗ್ಗೆ ಅವರು ಏನೂ ಮಾತನಾಡಿಲ್ಲ. ಆದುದರಿಂದ ಆಡಳಿತದ

ವ್ಯವಸ್ಥೆಯ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಬೇಕು. ಇನ್ನು ಮುಂದೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಈ ದೇಶವನ್ನು ಕೊಂಡ್ಯೊಯ್ಯಬೇಕೆ ಎನ್ನುವುದರ ಬಗ್ಗೆ ಬೆಳಕನ್ನು ಚಲ್ಲಬೇಕು.

ಶ್ರೀ ಹೆಚ್.ಎನ್. ನಂಜೇಗೌಡ: ಈಗ ನಮ್ಮ ಗೆಳೆಯ ನಾರಾಯಣರವರು ಕೇಳುತ್ತಿದ್ದಾರೆ, with the available forms of Government, the better form of Government is parliamentary democracy with all its inadequacies, inefficiency, insufficiency-everything this is the better form of Government..

SRI. R. NARAYANA: Thether it is fit for India?

SRI H.N. NANJEGOWDA: We have to make India fit.

MR. SPEAKER: Had it not been there you would not have come here.

SRI R. NARAYANA: Democracy is no answer in this country.

There are so many ills in our democratic system. Can you not think of alternative political system, because you have no solution...

ಅಧ್ಯಕ್ಷರು: ಈಗ ತಾವುಗಳೆಲ್ಲರೂ ಇದ್ದೀರಿ ನಾಳೆ ದಿವಸ ಬೆಳಿಗ್ಗೆ 10.00 ಗಂಟೆಗಳ ಸಭೆ ಸೇರೋಣ ಒಂದು ಗಂಟೆ ಹೆಚ್ಚುವರಿಯಾಗಿ ಸಿಗುತ್ತದೆ. ಆಮೇಲೆ ನಾಳೆ ಬೆಳಿಗ್ಗೆ 9.00 ಗಂಟೆಗೆ ಬಿಸಿನೆಸ್ ಅಡ್ವೈಸರಿ ಕಮಿಟಿಯನ್ನು ಇಟ್ಟುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾಳೆ ಬೆಳಿಗ್ಗೆ 10.00 ಗಂಟೆಗೆ ಸಭೆಯನ್ನು ಸೇರೋಣ ಆದರೆ 10.00 ಗಂಟೆಗೆ ಸೇರಿ ಪ್ರಶ್ನೋತ್ತರ ಆದಮೇಲೆ ಅಥವಾ ಮಧ್ಯಾಹ್ನ 2 ಗಂಟೆಗೆ ಅಥವಾ 2.30 ನಿಮಿಷಕ್ಕೆ ಊಟಕ್ಕೆ ಬಿಡುವಂತಹ ಸಮಯದಲ್ಲಿ ಸೇರೋಣ.

(ಈ ಹಂತದಲ್ಲಿ ಉಪಾಧ್ಯಕ್ಷರು (ಮಾನ್ಯ ಚಂದ್ರಶೇಖರ ಎಂ. ಮಾಮನಿಯವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

+ಶ್ರೀ ಯು.ಆರ್. ಸಭಾಪತಿ (ಉಡುಪಿ) ಮಾನ್ಯ ಅಧ್ಯಕ್ಷರೆ, ಈಗತಾನೆ ಮಾನ್ಯ ನಂಜೇಗೌಡರು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುತ್ತಾ ಬಹಳ ಸ್ವಾರಸ್ಯಕರವಾದಂತಹ ವಿಚಾರಗಳನ್ನು ಮಾತನಾಡಿದರು. ಪ್ರಾಯಶಃ ನಾವು ಈ ಸದನದಲ್ಲಿ ಮಾತನಾಡಿದಂತಹ ವಿಚಾರ ಕರ್ನಾಟಕ ರಾಜ್ಯದ ಜನತೆಗೆ ಯಾವ ಸಂದೇಶ ನೀಡಬೇಕು, ಕರ್ನಾಟಕ ರಾಜ್ಯದ ಜನತೆಗೆ ನೀವು ಕೊಟ್ಟಿರುವಂತಹ ಸಂದೇಶ ಏನು? ಎನ್ನುವುದರ ಬಗ್ಗೆ ನಾವು ಆಲೋಚನೆ ಮಾಡಬೇಕಾಗುತ್ತದೆ. ಮಾನ್ಯ ಹೆಚ್.ಎನ್. ನಂಜೇಗೌಡರು ಐ.ಎ.ಎಸ್. ಅಧಿಕಾರಿಗಳ ಬಗ್ಗೆ, ನ್ಯಾಯಾಧೀಶರುಗಳ ಬಗ್ಗೆ ಪತ್ರಕರ್ತರ ಬಗ್ಗೆ ಪತ್ರಿಕೆ ನಡೆಸುತ್ತಿರುವವರ ಬಗ್ಗೆ

ಬಹಳಷ್ಟು ವಿಚಾರಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇವತ್ತು ನಾವು ರಾಜಕಾರಣಗಳು ನಮ್ಮ ಜನರಿಗೆ ಯಾವ ಸಂದೇಶವನ್ನು ನೀಡುತ್ತೇವೆ, ಇವೊತ್ತು ನಮ್ಮ ಮುಖ್ಯಮಂತ್ರಿಗಳೇ ಟಿ.ವಿ. ಚಾನಲ್ ಒಂದು ಇಂಟರ್‌ವ್ಯೂ ಮಾಡುವಾಗ ಬಹಳ ಮುಕ್ತ ಮನಸ್ಸಿನಿಂದ ಬಹಳ ಮುಕ್ತ ಮನಸ್ಸಿನಿಂದ ಅವರ ಮುಕ್ತ ಮನಸ್ಸಿಗೆ ನಾವು ಅಭಿನಂದನೆಯನ್ನು ಕೊಡಲೇಬೇಕು. ಆದರೆ ಇಲ್ಲಿ ಜನರಿಗೆ ಸಿಕ್ಕಿದಂತಹ ಸಂದೇಶ ಏನೆಂದರೆ, ನಾವು ಮುಂದೆ ಬರತಕ್ಕಂತಹ ಯುವ ಜನಾಂಗಕ್ಕೆ ನಾವು ರಾಜ್ಯದ ಅಧಿಕಾರದ ಕುರ್ಚಿಯಲ್ಲಿ ಕುಳಿತುಕೊಂಡಿರುವವರು ಕೊಡುವಂತಹ ಸಂದೇಶ ಏನು? ನಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವಂತಹ ದೌರ್ಬಲ್ಯಗಳ ಪ್ರಚಾರವನ್ನು ಮಾಡಬೇಕೇ ಎನ್ನುವಂತಹ ಮಾತನ್ನು ನಾನು ನಮ್ಮ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಬೇಕಾಗಿದೆ. ನಮ್ಮ ಜೀವನದಲ್ಲಿ ನಾವು ಅಳವಡಿಸಿಕೊಂಡಿರುವಂಥ ದೌರ್ಬಲ್ಯಗಳ ಪ್ರಚಾರವನ್ನು ನಾವು ಮಾಡಬೇಕೇ ಎನ್ನುವ ಮಾತನ್ನು ನಾನು ಮುಖ್ಯಮಂತ್ರಿಗಳನ್ನು ಕೇಳಬೇಕಾಗಿದೆ. ನಾವು ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತುಕೊಂಡು ನಮ್ಮ ವೈಯಕ್ತಿಕ ಜೀವನದಲ್ಲಿರುವ ಮಾನಸಿಕ ದೌರ್ಬಲ್ಯಗಳನ್ನು ಅದನ್ನು ಬಹಳ ದೊಡ್ಡ ಸಾಧನೆ ಎಂದು ಯುವಜನಾಂಗಕ್ಕೆ ಸಂದೇಶ ಕೊಡುವುದಾದರೆ ಇದು ತೀರಾ ಅಲಕ್ಷ್ಯವಾದಂಥ ಮಾತು ಎಂದು ಹೇಳಬಯಸುತ್ತೇನೆ. ಇವೊತ್ತು ಆ ದೃಷ್ಟಿಯಲ್ಲಿ ನಂಜೇಗೌಡರು ಸಂದೇಶ ಕೊಡಬೇಕಾಗಿದೆ. ನಾವು ಯಾವ ರೀತಿಯ ನಡವಳಿಕೆಯನ್ನು ಮಾಡಬೇಕೆಂಬ ಬಗ್ಗೆ ಹೇಳಬೇಕಾಗಿದೆ. ಇವೊತ್ತು ಎಲ್ಲಾ ರಂಗಗಳಲ್ಲಿ ವ್ಯಕ್ತಿತ್ವಗಳು ಮೊರಾಲಿಟಿ ಇಲ್ಲದಂಥ ವ್ಯಕ್ತಿತ್ವಗಳಾಗಿ ಹೋಗಿವೆ. ಯಾವ ರಂಗದಲ್ಲಿ ಮೊರಾಲಿಟಿ ಇದೆ? ಶೈಕ್ಷಣಿಕ ರಂಗದಲ್ಲಿ ಇರಲಿ, ಅಧಿಕಾರಿಗಳಿರಲಿ, ನ್ಯಾಯಾಧೀಶರು ಇರಲಿ, ನ್ಯಾಯವಾದಿಗಳು ಇರಲಿ, ವೈದ್ಯರು ಇರಲಿ, ಪತ್ರಿಕಾರಂಗ ಇರಲಿ ಪ್ರತಿಯೊಂದು ರಂಗದ ಮೊರಾಲಿಟಿ ಕೂಡ ಹೋಗಿದೆ. ಆದರೆ ರಾಜಕಾರಣಿಗಳ ರಂಗದಲ್ಲಿ ಮಾತ್ರ ಅದಕ್ಕೆ ಪ್ರಚಾರ ಸಿಗುತ್ತದೆಯೇ ವಿನಾ ಉಳಿದಿದ್ದಕ್ಕೆ ಯಾವುದಕ್ಕೂ ಪ್ರಚಾರ ಸಿಗುವುದಿಲ್ಲ. ಏಕೆಂದರೆ ನಾವು ಈ ಸದನದಲ್ಲಿ ಚರ್ಚೆ ಮಾಡುತ್ತಾ ಇರುತ್ತೇವೆ. ಇಲ್ಲದಿದ್ದರೆ ನಾವು ಒಂದಲ್ಲ ಒಂದು ಕಡೆ ಹೋಗಿ ಭಾಷಣ ಕೊಡುವಾಗ ನಮ್ಮನ್ನು ನಾವು ಮೆಚ್ಚಿಸಿಕೊಳ್ಳುವುದಕ್ಕೋ ಅಥವಾ ಇನ್ನೊಬ್ಬರ ಮುಂದೆ ನಮ್ಮನ್ನು ಮೆಚ್ಚಿಸಿಕೊಳ್ಳುವುದಕ್ಕೋ ನಾವು ನಮ್ಮನ್ನು ವಿರೋಧ ಮಾಡಿಕೊಂಡು ಏನೇನೋ ಹೇಳಿಕೊಂಡುಬಿಡುತ್ತೇವೆ. ಇದು ನಮ್ಮ ಮುಂದಿನ ಯುವಜನಾಂಗಕ್ಕೆ ಹೋಗುವಂಥ ಒಂದು ಸಂದೇಶ. ಒಂದು ಮಾತು ನಾನು ಹೇಳುತ್ತೇನೆ. ಕಳೆದ ಎರಡು ವರ್ಷದ ಹಿಂದೆ ಎಂ.ಆರ್.ಪಿ.ಎಲ್. ಚಳುವಳಿ ಆದಾಗ ನನ್ನನ್ನು ಜೈಲಿಗೆ ಸಾಗಿಸಿದ್ದರು. ಒಂದು ದಿವಸ ಮಂಗಳೂರು ಸೆಂಟ್ರಲ್ ಜೈಲಿಗೆ ನಾನು ಹೋಗಿದ್ದೆ. ಅಲ್ಲಿ 180 ಜನ ಖೈದಿಗಳಿದ್ದರು. ನಾನು ಒಂದು ರೌಂಡ್ ಹೋದಾಗ 180 ಖೈದಿಗಳಲ್ಲಿ 140 ಜನ ಖೈದಿಗಳು ಯುವಕರಿದ್ದರು. 30 ವರ್ಷಕ್ಕಿಂತ ಕೆಳಪ್ರಾಯದ ಯುವಕರು. ಅದರಲ್ಲೂ ಬಿ.ಇ. ಗ್ರಾಜುಯೇಟ್ಸ್, ಎಂ.ಎ. ಗ್ರಾಜುಯೇಟ್ಸ್. ಅವರಲ್ಲಿ ಮೂರು ನಾಲ್ಕು ಜನ ವಕೀಲಿ ವೃತ್ತಿಯಲ್ಲಿದ್ದವರಿದ್ದರು. ಏನು ಮಾಡಿದ್ದಾರೆ ಅಪರಾಧ? ಕೊಲೆ ಅಪರಾಧ; ದೌರ್ಜನ್ಯ, ಅತ್ಯಾಚಾರ, ಕೊಲೆ ಸುಲಿಗೆ ಎಲ್ಲದರಲ್ಲೂ 30 ವರ್ಷಕ್ಕಿಂತ ಕೆಳಗಿನ ಯುವಕರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಗಳಾಗಿದ್ದರು. ಆ ಯುವಜನಾಂಗವನ್ನು ಇಂದು ಸಮಾಜಘಾತುಕ ಶಕ್ತಿಗಳಾಗಿ ಪರಿವರ್ತಿಸುವುದಕ್ಕೆ ಕಾರಣರು ಯಾರು ಎನ್ನುವ ಆತ್ಮಚಿಂತನೆಯನ್ನು ನಾವು ಇಲ್ಲಿ ಕುಳಿತುಕೊಂಡವರು ಮಾಡಬೇಕಾಗಿದೆ. ಏತಕ್ಕೆ ಈ ಸಮಾಜ ಹೀಗಾಗಿದೆ? ಒಬ್ಬರು ಮತ್ತೊಬ್ಬರಿಗೆ

ದೂರುತ್ತಾ ಇರುವುದು. ನ್ಯಾಯಾಧೀಶರ ಬಗ್ಗೆ ನಾವು ದೂರುತ್ತೇವೆ. ಪತ್ರಿಕಾಕರ್ತರುಗಳ ಬಗ್ಗೆ ನಾವು ದೂರುತ್ತೇವೆ. ಪತ್ರಿಕೆಯವರು ನಮ್ಮನ್ನು ದೂರುತ್ತಾರೆ. ಬುದ್ಧಿಜೀವಿಗಳು ಎಂದು ಹೇಳುವವರು ರಾಜಕಾರಣಿಗಳ ಬಗ್ಗೆ ಏನೇನೋ ಹೇಳಿಕೊಂಡು ತಿರುಗಾಡುತ್ತಾರೆ. ಆದರೆ ನಾವೆಲ್ಲರೂ ಒಟ್ಟಾಗಿ ಸೇರಿ ಪತ್ರಿಕಾ ರಂಗ ಇರಲಿ, ನ್ಯಾಯಾಧೀಶರಿರಲಿ, ವಕೀಲರಿರಲಿ, ಶಿಕ್ಷಕರಿರಲಿ ಅಥವಾ ಬುದ್ಧಿಜೀವಿಗಳಿರಲಿ ನಾವು ಈ ಸಮಾಜದಲ್ಲಿ ಎಲ್ಲಿ ತಪ್ಪಿಹೋಗಿದ್ದೇವೆ ಎಂಬುದನ್ನು ಎಲ್ಲರ ಜೊತೆ ಸೇರಿ ಕುಳಿತುಕೊಂಡು ಚರ್ಚೆ ಮಾಡುವ ಹವ್ಯಾಸಕ್ಕೆ ನಾವು ಹೋಗಿಲ್ಲ. ಇದರಿಂದಾಗಿ ಇವತ್ತು ರಾಜ್ಯದ ಜನತೆಗೆ ಈ ರೀತಿಯ ಪರಿಸ್ಥಿತಿ ಬಂದಿದೆ ಎಂಬ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗಿದೆ. ರಾಜ್ಯಪಾಲರ ಭಾಷಣ ಮೊನ್ನೆ ಏನು ಮಾಡಿದರು ಇದು ಕೇವಲ ಒಂದು ಸಾಂಪ್ರದಾಯಿಕ ಚರ್ವಿತಚರ್ವಣದ ಭಾಷಣ ಎಂದು ಹೇಳಬಯಸುತ್ತೇನೆ. ಏಕೆಂದರೆ ಎಲ್ಲಾ ರಾಜ್ಯಪಾಲರ ಭಾಷಣ ಉಚ್ಚರಿಸಿದ್ದನ್ನು ನೋಡಿದ್ದೇವೆ. ಒಂದಕ್ಕೊಂದು ಲಿಂಕ್ ಇಲ್ಲ. ಹಿಂದಿನ ವಿಧಾನಸಭಾ ಅಧಿವೇಶನದಲ್ಲಿ ಇವರು ಏನೆಲ್ಲಾ ಆಶ್ವಾಸನೆ ಕೊಟ್ಟಿದ್ದಾರೋ ಅದು ಈ ವಿಧಾನಸಭಾ ಅಧಿವೇಶನದಲ್ಲಿ ಮರೆತಿದ್ದಾರೆ, ಹಿಂದಿನ ವಿಧಾನಸಭೆಯಲ್ಲಿ ಏನೆಲ್ಲಾ ವಚನಗಳನ್ನು ಕೊಟ್ಟಿದ್ದಾರೋ ಅದೆಲ್ಲಾ ಮರೆತುಬಿಟ್ಟಿದ್ದಾರೆ. ಒಂದು ಮಾತು ಮಾತ್ರ ಸ್ಪಷ್ಟವಾಗಿ ಹೇಳುತ್ತೇನೆ. ಅವರು ರಾಜ್ಯಪಾಲರ ಭಾಷಣದಲ್ಲಿ ಮಾನ್ಯ ದೇವೇಗೌಡರು ಪ್ರಧಾನಿಯಾಗಿದ್ದು ಬಹಳ ಹೆಮ್ಮೆಯ ವಿಚಾರ ಎಂದು ಹೇಳಿದ್ದಾರೆ. ಹೌದು. ನಾನು ಒಪ್ಪಿಕೊಳ್ಳುತ್ತೇನೆ. ಕರ್ನಾಟಕದ ಒಬ್ಬ ವ್ಯಕ್ತಿ ಪ್ರಧಾನಮಂತ್ರಿಯಾಗಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಚಾರ. ಹಾಗೆಯೇ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಗಳಾಗಿರುವುದೂ ನಮಗೆಲ್ಲರಿಗೂ ಹೆಮ್ಮೆಯ ವಿಚಾರ. ಆದರೆ ಇವರಿಬ್ಬರ ನೇತೃತ್ವದ ಕೇಂದ್ರ ಹಾಗೂ ರಾಜ್ಯಸರ್ಕಾರ ನಮ್ಮ ಜನತೆಗೆ, ಜನಸಾಮಾನ್ಯರಿಗೆ, ಒಬ್ಬ ಮಧ್ಯಮ ವರ್ಗದ ಸಾಮಾನ್ಯ ವ್ಯಕ್ತಿಗೆ ಕೊಟ್ಟ ಬಳುವಳಿ ಏನು ಎಂದರೆ ಒಂದು ವರ್ಷದಲ್ಲಿ ಅವನ ಜೀವನ ಪರಿಸ್ಥಿತಿ ಎಲ್ಲಿ ಹೋಗಿದೆ ಎಂದರೆ ಮಧ್ಯಮವರ್ಗದವನು 2 ಸಾವಿರ ರೂಪಾಯಿ ವೆಚ್ಚದಲ್ಲಿ ತನ್ನ ಕುಟುಂಬವನ್ನು ಕಳೆದವರ್ಷ ನಿಬಾಯಿಸುತ್ತಿದ್ದರೆ ಈ ವರ್ಷ 3 ಸಾವಿರ ರೂಪಾಯಿ ಬೇಕು. ಇದು ಕೇಂದ್ರ ಹಾಗೂ ರಾಜ್ಯಸರ್ಕಾರಗಳು ಮಧ್ಯಮ ವರ್ಗದ, ತೀರಾ ಬಡತನದಲ್ಲಿರತಕ್ಕ ಜನರಿಗೆ ಕೊಟ್ಟಂಥ ಒಂದು ಬಳುವಳಿ ಎಂದರೆ ತಪ್ಪಾಗಲಾರದು. ಇದಕ್ಕೆ ನಾನು ಉದಾಹರಣೆ ಕೊಡುತ್ತೇನೆ. ಒಂದು ವರ್ಷದ ಹಿಂದೆ ಹಾಲಿಗೆ ಏಳೂವರಿ ರೂಪಾಯಿ ಇದ್ದರೆ ಈಗ ಹತ್ತು ರೂಪಾಯಿ ಆಗಿದೆ. ಒಂದು ವರ್ಷದ ಹಿಂದೆ ಅಕ್ಕಿ 10 ರೂಪಾಯಿ ಇದ್ದರೆ ಈಗ 15 ರೂಪಾಯಿ ಆಗಿದೆ. ವಿದ್ಯುತ್ ಬೆಲೆ 170 ರೂಪಾಯಿ ತಿಂಗಳಿಗೆ ಆಗುತ್ತಿದ್ದರೆ ಈಗ ವಿದ್ಯುಚ್ಛಕ್ತಿಗಾಗಿ 270 ರೂಪಾಯಿ ಕೊಡಬೇಕು. ನೀರಿನ ಬೆಲೆ 6 ರೂಪಾಯಿ ಇದ್ದದ್ದು 25 ರೂಪಾಯಿ ಆಯಿತು. ತೆಂಗಿನಕಾಯಿ 4 ರೂಪಾಯಿ ಇದ್ದದ್ದು ಈಗ 8 ರೂಪಾಯಿ ಆಗಿದೆ. ತರಕಾರಿ ಕೆ.ಜಿ.ಗೆ 4 ರೂಪಾಯಿ ಇದ್ದದ್ದು 16 ರೂಪಾಯಿ ಆಗಿದೆ. ಏತಕ್ಕೆ? ರೈತನಿಗೆ ಬೇಕಾದಹಾಗೆ ವಿದ್ಯುಚ್ಛಕ್ತಿಯನ್ನು ಕೊಡದೆ, ಅವರು ಪಂಪ್ ಸ್ಟಾರ್ಟ್ ಮಾಡದೆ ನೀರು ಅವರ ತೋಟಕ್ಕೆ ಬಿಡಲಿಕ್ಕೆ ಆಗದಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ತರಕಾರಿ ಬೆಲೆ ಏರಿತು. ತೆಂಗಿನ ಎಣ್ಣೆ 35 ರೂಪಾಯಿ ಇದ್ದದ್ದು 90 ರೂಪಾಯಿ ಆಯಿತು. ತೊಗರಿ ಬೇಳೆ 27 ರೂಪಾಯಿ ಇದ್ದದ್ದು 32 ರೂಪಾಯಿ ಆಯಿತು. ರೇಷನ್ ಅಕ್ಕಿ 7 ರೂಪಾಯಿ ಇದ್ದದ್ದು 8 ರೂಪಾಯಿ 25 ಪೈಸೆ ಆಯಿತು. ಸಕ್ಕರೆ 9 ರೂಪಾಯಿ

5 ಪೈಸೆ ಇದ್ದದ್ದು 10 ರೂಪಾಯಿ 30 ಪೈಸೆ ಆಯಿತು. ಬೆಲ್ಲ 12 ರೂಪಾಯಿ ಇದ್ದದ್ದು 17 ರೂಪಾಯಿ ಆಯಿತು. ಪೆಟ್ರೋಲ್, ಡೀಸೆಲ್ ಎಲ್ಲಾ ಲೆಕ್ಕಾಚಾರ ಹಾಕಿದರೆ ಪ್ರತಿಯೊಬ್ಬ ಮಧ್ಯಮ ವರ್ಗದವರಿಗೆ ಸಣ್ಣ ಪ್ರಮಾಮದ ಒಬ್ಬ ವ್ಯಕ್ತಿಗೆ, ಸಂಬಳದಲ್ಲಿ ನಿಭಾಯಿಸಿಕೊಂಡು ಹೋಗುವ ಒಬ್ಬ ವ್ಯಕ್ತಿಗೆ ಒಂದು ಸಾವಿರ ರೂಪಾಯಿ ಹೆಚ್ಚಿಗೆ ಖರ್ಚು ಮಾಡುವ ಬಳುವಳಿ ನಿಮ್ಮ ಸರ್ಕಾರದಿಂದ ಆಯಿತು ಎಂದು ಹೇಳಬಯಸುತ್ತೇನೆ. ಇದು ಹೆಮ್ಮೆಯ ವಿಚಾರವೆ? ಇದು ನಮ್ಮ ರಾಜ್ಯದ ಹಾಗೂ ನಮ್ಮ ರಾಷ್ಟ್ರದ ದುರಂತ ಎಂದು ಹೇಳಬಯಸುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೆ, ವಿದ್ಯುತ್ ದರ ಹೆಚ್ಚಿಸಿದಾಗ ನಮ್ಮ ಟ್ಯಾರಿಫ್ ಕಮಿಟಿಯಲ್ಲಿ ಬಹಳಷ್ಟು ವಾದ ಮಾಡಿದೆ. ಕೆ.ಇ.ಬಿ. ಅಧ್ಯಕ್ಷರಿಗೆ ನಾನು ಒಂದು ಪ್ರಶ್ನೆ ಕೇಳಿದೆ. ಟ್ಯಾರಿಫ್ ಏರಿಸೋಣ. ಆದರೆ ನಿಮ್ಮ ಎಫಿಷಿಯೆನ್ಸಿ ಅಷ್ಯೂರೆನ್ಸ್ ಏನು ಎಂದು ಕೇಳಿದೆ. ಎಫಿಷಿಯೆನ್ಸಿ ಲಿಷ್ಯೂರೆನ್ಸ್ ಏನೂ ಇಲ್ಲ. 600 ಕೋಟಿ ರೂಪಾಯಿಗಳ ಟ್ಯಾರಿಫ್ ಏರಿಸಿದಾಗ ಇಡೀ ವಿದ್ಯುತ್ ಮಂಡಲಿಯವರು ಅದನ್ನು ಯಾವರೀತಿಯಲ್ಲಿ ಉಪಯೋಗಿಸಬೇಕು ಎಂಬುದನ್ನು ಅವರು ವಿಂಗಡಣೆ ಮಾಡುವುದಿದ್ದರೆ ಅವರು ಹೇಳುತ್ತಾರೆ ಕೆ.ಪಿ.ಸಿ.ಗೆ ಕೊಡುವುದು ನಮಗೆ ಬಾಕಿ ಇದೆ, ಅದಕ್ಕೆ ನಾವು ಹೋಗಬೇಕಾಗಿದೆ ಎಂದು ಹೇಳಿದರು. ಹಾಗಾದರೆ ಇನ್‌ಫ್ರಾಸ್ಟ್ರಕ್ಚರ್ ಕ್ರಿಯೇಟ್ ಮಾಡಲಿಕ್ಕೆ 600 ಕೋಟಿ ರೂಪಾಯಿಗಳಲ್ಲಿ ಎಷ್ಟು ವಿಂಗಡಣೆ ಮಾಡಿದ್ದೀರಿ ಎಂದರೆ ಎವರ ಹತ್ತಿರ ಉತ್ತರ ಇಲ್ಲ. ಯಾವ ದಿವಸ ವಿದ್ಯುಚ್ಛಕ್ತಿ ಟ್ಯಾರಿಫ್ ಏರಿಸಿದರು ಅಂದಿನಿಂದ ಯಾವುದೇ ಕೆ.ಇ.ಬಿ. ಕಛೇರಿಗೆ ಹೋದರೆ ಅವರ ಹತ್ತಿರ ಕೇಳಿದರೆ ಲೈಟ್ ಕಂಬ ಇಲ್ಲ; ಟ್ರಾನ್ಸ್‌ಫಾರ್ಮರ್ ಇಲ್ಲ. ವೈರ್ ಇಲ್ಲ. ಹೊಸ ಕನೆಕ್ಷನ್ ಇಲ್ಲ. ಇದನ್ನು ನಾವು ನೋಡುವಾಗ ಹಾಗಾದರೆ 600 ಕೋಟಿ ರೂಪಾಯಿಗಳ ವಿದ್ಯುಚ್ಛಕ್ತಿ ಏರಿಕೆ ಮಾಡಿಸಿದ್ದಾದರೂ ಏತಕ್ಕೆ? ಇವತ್ತು ಈ ರೀತಿಯ ಸಂದಿಗ್ಧ ಪರಿಸ್ಥಿತಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಉಂಟು ಮಾಡಿದಾಗ ಇದನ್ನು ನಿಗ್ರಹಿಸುವ ಬದಲು ಅವರ ಅಧಿಕಾರಿಗಳು ಏನು ಬರೆದುಕೊಟ್ಟಿದ್ದರೋ ಅದನ್ನೇ ಅವರು ಆರ್ಡಿನೆನ್ಸ್ ಮಾಡಿ ಕಳುಹಿಸಿದರು. ರೈತನ ಪಂಪ್‌ಸೆಟ್ ಮೇಲೆ 10 ಸಾವಿರ ರೂಪಾಯಿ ಹಾಕಿದರು. ಒಬ್ಬ ರೈತ ಕೇಳಿದಕೂಡಲೇ ವಿದ್ಯುಚ್ಛಕ್ತಿ ಇಲಾಖೆ ಮಂತ್ರಿಗಳಾಗಲೀ ಮುಖ್ಯಮಂತ್ರಿಗಳಾಗಲೀ ಯಾರೇ ಆಗಲಿ ವಿದ್ಯುಚ್ಛಕ್ತಿಯನ್ನು ರೈತನಿಗೆ ಖಚಿತವಾಗಿ ಕೊಟ್ಟಿದ್ದರಿಂದ ಕೆ.ಇ.ಬಿ.ಗೆ ಲಾಸ್ ಆಯಿತು ಎಂದು ಹೇಳುತ್ತಾರೆ. ನಾನು ಕೇಳುತ್ತಿದ್ದೇನೆ ರೈತನಿಗೆ ವಿದ್ಯುಚ್ಛಕ್ತಿಯನ್ನು ಎಷ್ಟು ಗಂಟೆಗಳ ಕಾಲ ಕೊಟ್ಟಿದ್ದಾರೆ ಎಂಬ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸಲಿ. ಎಷ್ಟು ಇದರಿಂದ ನಷ್ಟವಾಗಿದೆ? ರೈತರನ್ನು ತೋರಿಸಿಕೊಂಡು ವಿದ್ಯುಚ್ಛಕ್ತಿ ದರವನ್ನು ಏರಿಸಿ ಕರ್ನಾಟಕ ರಾಜ್ಯದ ಜನತೆ ಅಂಧಕಾರದಲ್ಲಿರುವಂಥ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆಯೇ ವಿನಾ ಬೇರೆ ಯಾವುದನ್ನೂ ಮಾಡುವುದಕ್ಕೆ ಹೋಗಿಲ್ಲ. ಇವತ್ತು ವಿವಿಧ ವಿದ್ಯುತ್ ಕೇಂದ್ರಗಳಿಗೆ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಬಂದಿರತಕ್ಕಂಥ ದುಡ್ಡನ್ನು ಕೂಡ ಸರಿಯಾಗಿ ಉಪಯೋಗ ಮಾಡದೆ ಅಲ್ಲಲ್ಲಿ ಬರತಕ್ಕಂಥ ಸರ್ವೀಸ್ ಸ್ಟೇಷನ್ಸ್ ಯಾವುವಿವೆ ಅವುಗಳ ಬಗ್ಗೆಯೂ ಯಾವುದೇ ಜವಾಬ್ದಾರಿಯನ್ನು ಹೊಂದಲಿಲ್ಲ. ಎರಡು ವರ್ಷದ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಉಪಮುಖ್ಯಮಂತ್ರಿಯಾಗಿದ್ದಾಗ ವಿದ್ಯುಚ್ಛಕ್ತಿ ಖಾತೆಯನ್ನೂ ಅವರು ಇಟ್ಟುಕೊಂಡಿದ್ದರು. ಆಗ ಅವರು ಮಂಗಳೂರಿಗೆ ಬಂದಿದ್ದರು. ಅಲ್ಲಿ ನಾವೆಲ್ಲಾ ಶಾಸಕರು ಕೇಳಿದೆವು. ವಿವಿಧ ಕೇಂದ್ರಗಳ ಸಬ್‌ಸ್ಟೇಷನ್ಸ್ ಬಗ್ಗೆ ನಾವು ಕೇಳಿದಾಗ

ಎಲ್ಲಾ 96ರ ಮಾರ್ಚಿಯೊಳಗೆ ಮಾಡುತ್ತೇವೆಂದು ಹೇಳಿದ್ದರು. 1995ರಲ್ಲಿ ಇದನ್ನು ಅವರು ಹೇಳಿದ್ದು. 1996ರೊಳಗೆ ಎಲ್ಲಾ ಕಂಪ್ಲೀಟ್ ಮಾಡಿ ಮುಗಿಸುತ್ತೇವೆಂದು ಹೇಳಿದ್ದರು. ಕಾರ್ಕಳದಲ್ಲಿ ಕೆ.ಎಂ.ಆರ್. ಸಬ್‌ಸ್ಟೇಷನ್ ದಕ್ಷಿಮ ಕನ್ನಡ ಜಿಲ್ಲೆಗೆ ಬಹಳವಾಗಿ ಬೇಕು. ಆ ಕೆ.ಎಂ.ಆರ್. ಸಬ್‌ಸ್ಟೇಷನ್ನಿನ್ ಕೆಲಸ ಇವತ್ತಿನವರೆಗೂ ಮಾಡಿಲ್ಲ. ಕೇಳಿದರೆ ಹಣ ಇಲ್ಲ ಎಂದು ಹೇಳುತ್ತಿದ್ದಾರೆ. ಅವರೇ ಇವತ್ತು ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತುಕೊಂಡಿದ್ದಾರೆ. 95ರಲ್ಲಿ ವಿದ್ಯುತ್ ಖಾತೆ ಸಚಿವರಾಗಿದ್ದಾಗ ಮಂಗಳೂರಿನಲ್ಲಿ ಹೇಳಿದಂಥ ಹೇಳಿಕೆ ಏನು? ಇವತ್ತು ಅವರು ಮಾಡಿದ್ದು ಏನು? ಹಾಗಾದರೆ ಇವರ ಸಾಧನೆ ಏನು? ಕೇವಲ ಟ್ಯಾಕ್ಸ್ ಏರಿಸಿಕೊಂಡು ಹೋಗುವುದು ಮಾತ್ರ ಇವರ ಸಾಧನೆಯೇ? ಅಥವಾ ಜನರಿಗೆ ಹೆಚ್ಚಿನ ಫೆಸಿಲಿಟಿ ಕೊಡುವಂಥ ಕಾರ್ಯಕ್ರಮವನ್ನು ಏನಾದರೂ ತರುತ್ತೀರಾ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಕೇಳಬಯಸುತ್ತೇನೆ. ಇದಲ್ಲದೆ ಅನೇಕ ಸಂದರ್ಭದಲ್ಲಿ ವಿದ್ಯಾರ್ಥಿಗಳು ಬಹಳಷ್ಟು ನೊಂದುಕೊಂಡವರಿದ್ದಾರೆ. ವಿದ್ಯಾರ್ಥಿಗಳ ಪರಿಸ್ಥಿತಿಯಂತೂ ಚಿಂತಾಜನಕ. ಕಳೆದ ವರ್ಷ ಸಿ.ಇ.ಟಿ. ಪ್ರವೇಶ ಅವಕಾಶ ಯಾವಾಗ ಪ್ರಾರಂಭವಾಯಿತು ಎಂದರೆ ಪಿ.ಯು.ಸಿ. ಕಲಿತಂಥ 80 ಪರ್ಸೆಂಟ್ 30 ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಂಡಂಥ ಒಬ್ಬ ವಿದ್ಯಾರ್ಥಿಗೆ ಪ್ರವೇಶಾವಕಾಶ ಪ್ರಾರಂಭವಾಗಿದ್ದು ನವೆಂಬರ್ ತಿಂಗಳಲ್ಲಿ ಆ 5-6 ತಿಂಗಳ ವಿದ್ಯಾರ್ಥಿಗಳ ಜೀವನ ಏನು? ಅವರ ಪರಿಸ್ಥಿತಿ ಏನು? ಪ್ರವೇಶಾವಕಾಶ ಪಡೆದಮೇಲೆ ಅವರ ಪರಿಸ್ಥಿತಿ ಏನು? ಅವರಿಗೆ ಈಗ ರಜೆ ಇಲ್ಲ. ಯಾವುದೇ ವೃತ್ತಿ ಶಿಕ್ಷಣದವರು ಅವರು ಬಿ.ಡಿ.ಎಸ್. ಇರಲಿ ಎಂ.ಬಿ.ಬಿ.ಎಸ್. ಇರಲಿ ಯಾವುದೇ ಇರಲಿ ಆ ಮಕ್ಕಳಿಗೆ ಆದಿತ್ಯವಾರ ಕೂಡ ರಜೆ ಇಲ್ಲ. ಟ್ಯೂಷನ್‌ಗೆ ಹೋಗಬೇಕು. ಆರು ತಿಂಗಳ ಪೋಷನ್ ಅವರ ತಲೆಯ ಮೇಲೆ ಇಟ್ಟುಕೊಂಡು ಹೋಗಬೇಕು. ಇಂಥ ಪರಿಸ್ಥಿತಿಗೆ ಕಾರಣರು ಯಾರು? ಇವತ್ತು ಸಾರ್ವಜನಿಕ ಹಿತಾಸಕ್ತಿಯ ಪ್ರಶ್ನೆಗಳು ಸರ್ವೋಚ್ಚನ್ಯಾಯಾಲಯಕ್ಕೆ ಬರುವಹಾಗೆ ಮಾಡಿದವರು ಯಾರು? ಶುರುವಿಗೆ ಮುಂದಾಲೋಚನೆ ಮಾಡಿಕೊಂಡು ಇಂಥದ್ದಕ್ಕೆ ಅವಕಾಶ ಕೊಡದೆ ಎಲ್ಲರನ್ನೂ ಕರೆಸಿ ಈ ತಿದ್ದುಪಡಿ ಮಾಡಿ ಒಂದು ವೇಳೆ ಸರಿಪಡಿಸಿದ್ದಿದ್ದರೆ ನಾವು ಜೂನ್ ತಿಂಗಳಲ್ಲಿ ಸಿ.ಇ.ಟಿ.ಯನ್ನು ಪ್ರಾರಂಭ ಮಾಡಬಹುದಾಗಿತ್ತು. ಇನ್ನೊಮ್ಮೆ ನಾನು ಎಚ್ಚರಿಕೆ ಕೊಡುತ್ತಿದ್ದೇನೆ. ಕಳೆದವರ್ಷದ ಹಾಗೆ ಈ ವರ್ಷ ಮಾಡುವುದಕ್ಕೆ ಹೋಗಬೇಡಿ. ಏನಾದರೂ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗಳು ಬರುವಂತಿದ್ದರೆ ಮುಂದಾಗಿಯೇ ಎಲ್ಲರನ್ನೂ ಕರೆಸಿ ಮಾತನಾಡಿ ಇದಕ್ಕೆ ಸಾಧನೆ ಮಾಡಿ ತೋರಿಸಬೇಕೆಂದು ನಾನು ಕಳಕಳಿಯಿಂದ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಈ ವಿದ್ಯಾರ್ಥಿಗಳಿಗೆ ಇವತ್ತು 85 ಪರ್ಸೆಂಟಿಗಿಂತ ಮೇಲ್ಪಟ್ಟವರಿಗೆ ಮಾತ್ರ ಮೆರಿಟ್‌ನಲ್ಲಿ ಸೀಟು ಸಿಗುತ್ತಿದೆ. ಅವರು ಅಷ್ಟು ಕಷ್ಟಪಟ್ಟು ವಿದ್ಯಾಭ್ಯಾಸ ಪಡೆದಾಗ ಅವರಿಗೆ ಪ್ರೋತ್ಸಾಹ ಕೊಡುವ ರೀತಿಯಲ್ಲಿ ತಮ್ಮ ಸರ್ಕಾರ ವರ್ತನೆ ಮಾಡದಿದ್ದರೆ ಹೇಗೆ? ಹಾಗಾದರೆ ಸರ್ಕಾರದ ಸಾಧನೆ ಎಂದು ರಾಜ್ಯಪಾಲರು ಹೇಳಿರುವುದು ಏನು ಎಂದು ನಾನು ಪ್ರಶ್ನಿಸುವುದಕ್ಕೆ ಇಚ್ಛಿಪಡುತ್ತೇನೆ. ಇನ್ನೂ ಬಹಳ ಪ್ರಮುಖವಾದ ಪ್ರಶ್ನೆ ಎಂದರೆ ನಮ್ಮನ್ನೆಲ್ಲ ಇವರು ಕರೆಸಿಕೊಂಡ ರೀತಿ. ಶಾಸಕರು, ಚುನಾಯಿತ ಪ್ರತಿನಿಧಿಗಳು ನಾವು. ಇವತ್ತು ಚುನಾಯಿತ ಪ್ರತಿನಿಧಿಗಳಿಗೆ ಎಷ್ಟು ಬೆಲೆ ಇದೆ? ಈ ಸರ್ಕಾರ ಚುನಾಯಿತ ಪ್ರತಿನಿಧಿಗಳಿಗೆ ಎಷ್ಟು ಬೆಲೆ ಕೊಡುತ್ತಿದೆ ಎನ್ನುವುದರ ಬಗ್ಗೆ ನಮ್ಮ ಧರಣಿಯ ಪ್ರಶ್ನೆಬಂದಾಗ ನಾನು ಮೊನ್ನೆ ಒಂದು ಘಟನೆಯನ್ನು ತಮಗೆ ಹೇಳಿದೆ. ಆ ದಿವಸ ನನಗೆ

ವಿವರಿಸುವುದಕ್ಕೇ ಬಿಡಲಿಲ್ಲ. ಆದರೆ ಈಗ ನಾನು ಪುನಃ ವಿವರಿಸುವುದಕ್ಕೆ ಬಯಸುತ್ತೇನೆ. ಏಕೆಂದರೆ ಕೇಳಿದರೆ ಯಾವನೋ ಒಬ್ಬ ರೆವಿನ್ಯೂ ಅಧಿಕಾರಿ ನಮ್ಮನ್ನು ಕೂರಿಸಿ, ಎ.ಸಿ. ಬರುತ್ತಾರೆ ಎಂದು ಹೇಳಿ ರಾತ್ರಿ 11 ಗಂಟೆವರೆಗೆ ನಮ್ಮನ್ನು ಕೂರಿಸಿ, ಕಡೆಗೆ ಬರುವುದಿಲ್ಲ ಎಂದು ಹೇಳಿದಮೇಲೆ ನಾವು ಹೊರಟುಬಂದಾಗ, ಈ ರೆವಿನ್ಯೂ ಅಧಿಕಾರಿ ನಾವೇ ಆತನ್ನು ತಂದುಕೂಡಿಸಿ ಬೀಗ ಹಾಕಿದ್ದೇವೆ ಎಂದು ಹೇಳಿ ನಮ್ಮ ಮೇಲೆ ಕ್ರಿಮಿನಲ್ ಕೇಸ್, ಯಾವ್ಯಾವುದೋ ಕೊಲೆಕಟ್ಟಲೆ ಮೇಲೆ ಹಾಕುತ್ತಾರೆ, ಹಾಗೆ ಹಾಕಿದ್ದಾರೆ. ಹಾಗಾದರೆ ಈ ಸರ್ಕಾರ ಮಾಡಿದ್ದಾದರೂ ಏನು? ಅದನ್ನು ಸಂಪೂರ್ಣವಾಗಿ ನಾನು ಅಧಿವೇಶನದಲ್ಲಿ ಪ್ರಸ್ತಾಪಿಸಿದೆ. ಆಗಿನ ರೆವಿನ್ಯೂ ಮಂತ್ರಿಗಳಾಗಿದ್ದ ಮಾನ್ಯ ಜಾಲಪ್ಪನವರು ಏನು ಹೇಳಿದರು ಎಂದರೆ ಡಿವಿಜನಲ್ ಕಮೀಷನರ್ ಅವರಿಂದ ತನಿಖೆ ಮಾಡಿದಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹಾಗೆ ಹೇಳಿದ, ಈ ವಚನ ಕೊಟ್ಟಂಥ ಸರ್ಕಾರ ವಚನಭ್ರಷ್ಟವಾಗಿ ಎರಡು ವರ್ಷವಾಯಿತು. ಇವರಿಗೆ ಇನ್ನೂ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಹಾಗಾದರೆ ಚುನಾಯಿತ ಪ್ರತಿನಿಧಿಗಳನ್ನು ಯಾವರೀತಿ ಇವರು ನಡೆಸಿಕೊಂಡು ಹೋಗುತ್ತಾರೆಂಬುದನ್ನು ಹೇಳಲಿ. ಆಯಿತು. ಇವರು ಹೇಳಿದ ಒಂದು ತಿಂಗಳ ಒಳಗೆ ಕುಂದಾಪುರ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕಟ್ಲೆ ಹಾಕಿದರು. ಮ್ಯಾಜಿಸ್ಟ್ರೇಟ್‌ರಿಂದ ನಮಗೆ ಸಮನ್ಸ್ ಬರಬೇಕು. ಆದರೆ ಸಮನ್ಸ್ ಬರಲಿಲ್ಲ. ಆವಾಗ ಮಾನ್ಯ ಸಿಂಧ್ಯಾ ಸಾಹೇಬರು ಹೋಮ್‌ಮಿನಿಸ್ಟರ್ ಆಗಿ ಇದ್ದರು. ಸಮನ್ಸ್ ನಮಗೆ ಇಷ್ಟು ಮಾಡದೆ ಅಬ್ಸ್ಕ್ಯಾಂಡಿಂಗ್ ಎಂದು ಹೇಳಿ, ಮ್ಯಾಜಿಸ್ಟ್ರೇಟ್‌ರ ಮುಂದೆ ಹೇಳಿದಂಥ ಅಧಿಕಾರಿಗಳನ್ನು ನೀವು ಸಾಕುತ್ತೀರಿ ಎಂದು ಆದರೆ ಇದಕ್ಕೆ ಏನು ಹೇಳಬೇಕು? ನಾವು ಶಾಸಕರು ಎಲ್ಲಿಯಾದರೂ ಅಬ್‌ಸ್ಕ್ಯಾಂಡಿಂಗ್ ಆಗುವುದಕ್ಕೆ ಸಾಧ್ಯವಾಗುತ್ತದೆಯೇ? ಪ್ರತಿಯೊಂದು ದಿನ ಸಭೆ, ಸಮಾರಂಭಗಳಲ್ಲಿ ನಾವು ಪಾಲ್ಗೊಳ್ಳಬೇಕು. ಜಿಲ್ಲಾ ಪಂಚಾಯತ್ ಸಮಿತಿಯಲ್ಲಿ ಪಾಲುಗೊಳ್ಳಬೇಕು, ತಾಲ್ಲೂಕು ಪಂಚಾಯತ್ ಸಮಿತಿಯಲ್ಲಿ ಪಾಲುಗೊಳ್ಳಬೇಕು. ಇಂತಹ ನಮ್ಮನ್ನು ಅಬ್‌ಸ್ಕ್ಯಾಂಡಿಂಗ್ ಅಂತ ಹೇಳಿದಂಥ ಅಧಿಕಾರಿಗಳು ನೀವು ಸಾಕುತ್ತಿದ್ದಿರಲ್ವಾ? ಎರಡನೇ ಅಧಿವೇಶನದಲ್ಲಿ ನಾನು ಕೇಳಿದೆ. ಏಕೆ ಹೀಗೆ ಮಾಡುತ್ತಿದ್ದೀರಿ, ಇದು ಸರಿಯಲ್ಲ ಎಂದು ಹೇಳಿದರೆ ನಾವು ವಿತ್‌ಡ್ರಾ ಮಾಡುತ್ತೇವೆ ಎಂದು ಹೇಳಿ, ಇವತ್ತು ನಾನ್ ಬೇಲೆಬಲ್ ಅರೆಸ್ಟ್ ವಾರಂಟ್‌ನ್ನು ಇವರು ಕಳುಹಿಸುತ್ತಾರೆ. ಮೊನ್ನೆ ಧರಣೆ ಕುಳಿತರೂ ಕೂಡ ಇನ್ನೂ ಎರಡು ದಿವಸ ಬೇಕು ಎಂದು ಕೇಳುವಂಥ ಮಾತನ್ನು ನಾಣಯ್ಯನವರು ಹೇಳುತ್ತಾರೆ ಎಂದು ಆದರೆ, ಇವತ್ತು ಆ ಅಧಿಕಾರಿಗಳು ಅಧ್ಯಕ್ಷರ ಮೂಲಕ ನಮಗೆ ಸಮನ್ಸ್ ಜಾರಿ ಮಾಡಲಿಕ್ಕೆ ಹೊರಡುತ್ತಾರೆ ಎಂದು ಆದರೆ, ನಾವು ಏನು ಹೇಳಬೇಕು? ಮಾನ್ಯ ಉಪಾಧ್ಯಕ್ಷರೇ, ಬ್ರಹ್ಮಾವರದಲ್ಲಿ ಜಯರಾಮ ಶೇಲೇಗಾರ್ ಅವರ ಕೊಲೆಯಾಯಿತು. ಇವತ್ತಿಗೂ ಕೂಡ ಅಪರಾಧಿಗಳನ್ನು ಅರೆಸ್ಟ್ ಮಾಡುವುದಕ್ಕೆ ಈ ಸರ್ಕಾರದಿಂದ ಆಗಲಿಲ್ಲ. ನಮ್ಮ ಒಟ್ಟಿಗೆ ಇಲ್ಲಿ ಕುಳಿತಿರುತ್ತಿದ್ದಂಥ ಮಾನ್ಯ ಶಾಸಕರಾದ ಶ್ರೀ ಚಿತ್ತರಂಜನ್ ಅವರ ಕೊಲೆಯಾಯಿತು. ಕೊಲೆಪಾತಕರನ್ನು ಇವತ್ತಿನವರೆಗೂ ಅರೆಸ್ಟ್ ಮಾಡುವುದಕ್ಕೆ ಆಗಲಿಲ್ಲ. ಆದರೆ ಏನೂ ಮಾಡದಿದ್ದ ಶಾಸಕರನ್ನು, ಸಾರ್ವಜನಿಕರಿಗೆ ನಾವು ಸಹಾಯ ಮಾಡುವುದಕ್ಕೆ ಹೋದಾಗ ನಮಗೆ ಕಿರುಕುಳ ಕೊಡತಕ್ಕಂಥ ಯಾವ ಅಧಿಕಾರಿಗಳು ಇದ್ದಾರೆ, ಆ ಅಧಿಕಾರಿಗಳ ಮುಖಾಂತರ ನಮ್ಮ ಮೇಲೆ

ಕೊಲೆಕಟ್ಟೆ ಹಾಕುತ್ತಾರೆ ಎಂದು ಆದರೆ ಇವರ ನಡತೆ, ಇವರ ಸರ್ಕಾರ ಚುನಾಯಿತ ಪ್ರತಿನಿಧಿಗಳನ್ನು ಯಾವರೀತಿ ನಡೆಸಿಕೊಂಡು ಹೋಗುತ್ತಿವೆ ಎಂಬುದನ್ನು ನಾನು ಹೇಳಬಯಸುತ್ತೇನೆ.

ಇನ್ನು, ಆಶ್ರಯದ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಬಗರ್‌ಹುಕುಂ ಕಮಿಟಿ ಇದೆ. ಇಲ್ಲಿ ಬಗರ್‌ಹುಕುಂ ಕಮಿಟಿಯಲ್ಲಿ ಶಾಸಕರೇ ಅಧ್ಯಕ್ಷರಾಗಿರುತ್ತಾರೆ ಎಂದು ಹೇಳಿದಿರಿ. ಆಯಿತು. ಉಡುಪಿ ತಾಲ್ಲೂಕಿನಲ್ಲಿ ನಾಲ್ಕು ಜನ ನಾವು ಶಾಸಕರು ಇದ್ದೇವೆ. ನಾನು, ವಸಂತ ಸಾಲಿಯಾನವರು, ಪ್ರತಾಪಚಂದ್ರಶೆಟ್ಟಿ, ಮತ್ತು ಜಯಪ್ರಕಾಶ ಹೆಗಡೆಯವರು. ಅಕ್ರಮ ಸಕ್ರಮ ಸಮಿತಿಗೆ ನನ್ನನ್ನು ಅಧ್ಯಕ್ಷರನ್ನಾಗಿ ಮಾಡಿದರು. ಎರಡು ತಿಂಗಳು ನಾನು ಸಭೆ ನಡೆಸಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಆದಷ್ಟು ಬೇಗ ಮಾಡುವುದಕ್ಕೆ ಹೊರಟಾಗ ಒಂದು ದಿವಸ ಆರ್ಡರ್ ಬಂತು ನಿಮ್ಮನ್ನು ಅಧಿಕಾರದಿಂದ ತೆಗೆಯಲಾಗಿದೆ ಎಂದು ಹೇಳಿ. ನನ್ನನ್ನು ಲ್ಯಾಂಡ್ ಟ್ರಿಬ್ಯುನಲ್‌ಗೆ ಮೆಂಬರ್ ಮಾಡಿದರು. ನಾಲ್ಕು ಸಿಟ್ಟಿಂಗ್ಸ್ ಆಯಿತು. ಇಷ್ಟು ಸಿಟ್ಟಿಂಗ್ಸ್ ಆದಮೇಲೆ ನನ್ನನ್ನು ತೆಗೆಯಲಾಗಿದೆ ಎಂದು ಹೇಳಲೇ ಲ್ಲ. ಬೇರೆಯವರನ್ನು ಮಾಡಿದರು. ಅಕ್ರಮಸಕ್ರಮ ಸಮಿತಿಗೆ ಮಂಗಳೂರು ತಾಲ್ಲೂಕಿನಲ್ಲಿ ಯೋಗಿಶ್‌ಭಟ್ ಅವರನ್ನು ಮಾಡಿದರು. ನಾನೇನೂ ಅಪೇಕ್ಷೆ ಪಟ್ಟಿರಲಿಲ್ಲ. ನನ್ನನ್ನು ಮಾಡಿದರು. ಆಮೇಲೆ ತೆಗೆದುಕೊಂಡು ರಮಾನಾಥರೈ ಅವರನ್ನು ಮಾಡಿದರು. ಒಬ್ಬ ಶಾಸಕ ಸದಸ್ಯನಾಗಿದ್ದು ಕ್ಷೇತ್ರದಲ್ಲಿ ಪರಿಚಯವಾದ ಮೇಲೆ ಅವನು ಕಾರ್ಯನಿರ್ವಹಣೆ ಮಾಡುತ್ತಿರುವ ಹೊತ್ತಿಗೆ ಅವನನ್ನು ಬದಲಾಯಿಸುವುದು ಒಂದೇ, ಕೊಲೆ ಮಾಡುವುದೂ ಒಂದೇ. ಮತದಾರರ ದೃಷ್ಟಿಯಲ್ಲಿ ನಮ್ಮ ಸ್ಥಿತಿ ಏನು? ಇದನ್ನು ನೀವು ಏಕೆ ಹೀಗೆ ಮಾಡುತ್ತೀರಿ ಇದಕ್ಕೆ ಅರ್ಥವೇ ಇಲ್ಲವೆಂದು ನಾನು ಹೇಳುತ್ತಿದ್ದೇನೆ.

ಆಮೇಲೆ ನಮ್ಮ ಸರ್ಕಾರದ ಮಂತ್ರಿಗಳು ಅವರೇ ಬಗರ್‌ಹುಕುಂ ಸಮಿತಿಗೆ ಅಧ್ಯಕ್ಷರಾಗಿರುವುದು, ಇದು ಎಂತಹ ತಮಾಷೆ? ಮಂತ್ರಿಗಳೇ ಸಮಿತಿಯ ಅಧ್ಯಕ್ಷರು. ನಾವು ಮೂರು ಜನ ಎಂ.ಎಲ್.ಎ.ಗಳು ಇದ್ದೇವೆ. ನಮ್ಮಲ್ಲಿ ಯಾರನ್ನು ಸದಸ್ಯರನ್ನಾಗಿ ಮಾಡಲಿಲ್ಲ. ಯಾರ್‍ಯಾರೋ ಅವರ ಪಕ್ಷದ ಕಾರ್ಯಕರ್ತರನ್ನು ಮಾಡಿದರು, ಎಂದರೆ ಇವರು ಶಾಸಕರಿಗೆ ಯಾವರೀತಿ ಬೆಲೆ ಕೊಡುತ್ತಾರೆ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆರಾಧನಾ ಕಮಿಟಿಗೆ ನನ್ನನ್ನು ಚೇರ್ಮನ್‌ಆಗಿ ಮಾಡಿದರು. ವಿಧಾನಸಭೆ ಕ್ಷೇತ್ರಕ್ಕೆ ಸಂಬಂಧಪಟ್ಟ ಕಮಿಟಿಗೆ ಕಾಪು ಕ್ಷೇತ್ರಕ್ಕೆ ಎರಡು ಜನರನ್ನು ಹಾಕಿದರು. ಅಲ್ಲಿಂದ ಬ್ರಹ್ಮಾವರ ಕ್ಷೇತ್ರದಿಂದ ಎರಡು ಜನರನ್ನು ಹಾಕಿದರು. ಮತ್ತೆ ಬಂತು ಒಂದು ಪತ್ರ. ಆರಾಧನಾ ಸಮಿತಿಗೆ ಸದಸ್ಯರುಗಳನ್ನು ಹಾಕಿದ್ದು ಸರಿಯಾಗಲಿಲ್ಲ. ನೀವು ಕಮಿಟಿಯನ್ನು ಮುಂದುವರೆಸಬೇಡಿ ಎಂದು. ಹೊಸ ಕಮಿಟಿಗೆ ಸದಸ್ಯರನ್ನು ಕೊಡುವ ತನಕ ನೀವು ಮುಂದುವರೆಸುವುದು ಬೇಡ ಎಂದು ಹೇಳಿದರು. ಈಚೆಯಿಂದ ಡಿ.ಸಿ.ಯವರು ನನಗೆ ಒಂದು ಪತ್ರ ಕಳುಹಿಸಿದರು. ಆರಾಧನಾ ಸಮಿತಿಯಲ್ಲಿ 9ಲಕ್ಷ ರೂಪಾಯಿ ಉಳಿದುಹೋಗಿದೆ. ನೀವು ಏಕೆ ಖರ್ಚು ಮಾಡಲಿಲ್ಲ ಎಂದು ಅವರು ಕೇಳುತ್ತಿದ್ದಾರೆ. ಹಾಗಾದರೆ ಈ ಸರ್ಕಾರ ಇರಬೇಕೇ, ಹೋಗಬೇಕೆ ಎನ್ನುವ ತೀರ್ಮಾನ ಆಗಬೇಕು. ಇವತ್ತು ಜನ ತಿರಸ್ಕಾರ ಮಾಡುವಂಥ ಎಲ್ಲಾ ಕಾರ್ಯಕ್ರಮಗಳಿಗೆ ಇವರು ಫೌಂಡೇಷನ್ ಹಾಕುತ್ತಿದ್ದಾರೆ. ಇವರು ಪಾಲನೆ ಮಾಡುವಂಥ

ಲಾ ಅಂಡ್ ಆರ್ಡರ್ ಹೇಗಿದೆ? ರಾಜ್ಯದಲ್ಲಿ ಯಾವ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ? ಇವೆಲ್ಲವನ್ನೂ ನಾವು ನೋಡುವುದಿದ್ದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ದೊಡ್ಡ ಗಲಾಟೆ ಪರಿಸರದ ಬಗ್ಗೆ ಆಯಿತು. ಇದು ತಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ನಾನೇನೂ ಅದರ ಹೆಚ್ಚಿಗೆ ವಿವರ ಹೇಳಬೇಕಾಗಿಲ್ಲ. ಈ ಸದನದಲ್ಲಿ ನಾನು ಬೇಕಾದಷ್ಟು ಸಲ ಹೇಳಿದ್ದೇನೆ. ಬೃಹತ್ ಕೈಗಾರಿಕೆಗಳು ಬರುವುದರ ಬಗ್ಗೆ ಬಹಳ ದೊಡ್ಡ ಸಂಘಟನೆ ಮಾಡಿ ನಾವು ಹೋರಾಟ ಮಾಡಿದ್ದೆವು. ಎಂ.ಆರ್.ಪಿ.ಎಲ್. ಸಂಸ್ಥೆ ಬಂತು. ಅವರು ಪೈಪ್‌ಲೈನ್ ಹಾಕಿದಾಗ ಬಹಳ ಅನಾಹುತವಾಗಿ ಮೂರು ದಿವಸ ಜಿಲ್ಲೆ ಬಂದ್ ಆಯಿತು. ನಂತರ ಆಗಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ದೇವೇಗೌಡರ ಅಧ್ಯಕ್ಷತೆಯಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಸದಸ್ಯರುಗಳನ್ನು ಕೂರಿಸಿಕೊಂಡು ಒಂದು ತೀರ್ಮಾನಕ್ಕೆ ಬಂದರು. ಅದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಎಲ್ಲಾ ಚರ್ಚೆಯಾದಮೇಲೆ ಮಾನ್ಯ ದೇವೇಗೌಡರು ದಸ್ಕತ್ ಹಾಕಿದ ಒಂದು ಕಾಪಿ ಇದೆ. ಅದರ ಮೇಲೆ ಗವರ್ನಮೆಂಟ್ ಆರ್ಡರ್ ಕೂಡ ಆಯಿತು. ಅದನ್ನು ನಾನು ಓದುತ್ತೇನೆ....

"After further discussions, the following decisions were taken. A citizens committee under the Chairmanship of the Deputy Commissioner, Dakshina Kannada District, would be constituted to ensure proper monitoring of implementation of socio-economic and infrastructure development works and also monitoring implementation of Government guidelines, decisions, orders related to mega projects. ಎಂದು ಹೇಳುವಂತಹ ಡಿಸಿಷನ್ ಆಗಿದೆ. ಇದರ ಬಗ್ಗೆ ಗವರ್ನಮೆಂಟ್ ಆರ್ಡರ್ ಆಗಿದೆ. ನಾನು ಎಲ್ಲವನ್ನೂ ಓದಿ ಹೇಳುವುದಿಲ್ಲ. "MRPL will provide at least one suitable job per family among those who have lost land for the project and wherever necessary MRPL will also arrange for suitable training for such persons to upgrade their skills."

ಇದಿಷ್ಟು ಆಗುವಾಗ ಎಂ.ಆರ್.ಪಿ.ಎಲ್. ಅಧಿಕಾರಿಗಳು ಇದ್ದಾರೆ. ರೆಸಲ್ಯೂಷನ್ ಆಗಿ ಹೈಕೋರ್ಟಿನಿಂದ ಸ್ಟೇಆಗಿದೆ. 18 ಕೋಟಿ ರೂಪಾಯಿ ಮೂಢಾದವರಿಗೆ ಕೊಡುವುದಕ್ಕೆ ಇದೆ. ಇದು ಎಂ.ಆರ್.ಸಿ.ಎಲ್. ಅವರು ಕೊಟ್ಟಂಥ ಬಳುವಳಿ...

"A study on carrying cepacity of the environment in the region will be made before clearing new projects in the district."

ಇವತ್ತು ನಾನು ಹೇಳುತ್ತೇನೆ, ಮುಖ್ಯಮಂತ್ರಿಗಳು ಹೋದಲ್ಲಿ, ಬಂದಲ್ಲಿ ಕೊಜೆಂಟ್ರಿಕ್ಸ್ ಬರುತ್ತದೆ, ಕೊಜೆಂಟ್ರಿಕ್ಸ್ ಬರುತ್ತದೆ-ಅದನ್ನು ತರುತ್ತೇವೆ ಎಂದು ಹೇಳುತ್ತಾರೆ. ಇದಕ್ಕೆ ಏನು ಬೆಲೆ ಬಂತು? ಇದು ಗವರ್ನಮೆಂಟ್ ಆರ್ಡರ್ ಆಗಿದೆ. ಕ್ಯಾರಿಯಿಂಗ್ ಕೆಪ್ಯಾಸಿಟಿಯನ್ನು, ದಕ್ಷಿಣ ಕನ್ನಡ ಜಿಲ್ಲೆಯ ಧಾರಣ ಶಕ್ತಿಯನ್ನು ಅಧ್ಯಯನ ಮಾಡುವ ಬಗ್ಗೆ ಸರ್ಕಾರ ತೆಗೆದುಕೊಂಡಂಥ ಕಾರ್ಯಕ್ರಮ ಏನು ಎಂಬುದನ್ನು ಅವರು ಸ್ಪಷ್ಟಪಡಿಸಬೇಕು. ಆಮೇಲೆ ಕೊಜೆಂಟ್ರಿಕ್ಸ್ ಬರಲಿ,

ಬಿಡಲಿ, ಏನು ಬೇಕಾದರೂ ಬರಲಿ. ನಾವು ಬೇಡ ಎಂದು ಹೇಳುವುದಿಲ್ಲ. ಆದರೆ ಒಂದೊಂದು ಕಡೆಯಲ್ಲಿ ಎರಡು ಸಾವಿರ ಮೆಗಾವ್ಯಾಟ್ ಥರ್ಮಲ್ ಪ್ಲಾಂಟ್ ತರುತ್ತೇವೆಂದಾಗ ಅದು ನಾಲ್ಕು ಗ್ರಾಮಗಳ ಒಳಗೆ ಹೋಗುತ್ತದೆ ಎಂದರೆ ಅದಕ್ಕೆ ನಮ್ಮ ವಿರೋಧ. ಸಣ್ಣಸಣ್ಣ ನೂರು-ಇನ್ನೂರು ಮೆಗಾವ್ಯಾಟ್‌ನ ಮಿನಿ ಥರ್ಮಲ್ ಪ್ಲಾಂಟ್‌ಗಳ ಮಾತನ್ನು ಹೇಳಿ ಇವತ್ತು ಸಣ್ಣಸಣ್ಣ ಥರ್ಮಲ್ ಪ್ಲಾಂಟ್‌ಗಳೂ ಇಲ್ಲ, ದೊಡ್ಡ ಪ್ಲಾಂಟ್‌ಗಳೂ ಇಲ್ಲ. ಒಂದು ಕಡೆ ಪರಿಸರವಾದಿಗಳ ಹೋರಾಟ, ಮತ್ತೊಂದು ಕಡೆ ಇವರ ಕಿರುಕುಳ. ಮಾನ್ಯ ಉಪಾಧ್ಯಕ್ಷರೇ, ಮೊನ್ನೆದಿವಸ ಕೊಜೆಂಟ್ರಿಕ್ಸ್ ಏನು ಬರುತ್ತಿದೆ ಇದರ ಬಗ್ಗೆ ಒಂದು ಸರ್ವೆ ಮಾಡುವುದಕ್ಕೆ ಜಿಲ್ಲಾಧಿಕಾರಿಗಳು, ಎಸ್.ಪಿ. ಯವರು ಹೋದರು. ಹೇಗೆ ಹೋದರು ಸ್ವಾಮಿ? ಮೂರು ಸಾವಿರ ಪೋಲೀಸರನ್ನು ಬೆಳಿಗ್ಗೆ 5 ಗಂಟೆಗೆ ಕಳುಹಿಸಿಕೊಟ್ಟಿದ್ದಾರೆ. ಮೂರು ಸಾವಿರ ಜನ ಪೋಲೀಸರನ್ನು ತೆಗೆದುಕೊಂಡು ಸರ್ವೆ ಮಾಡುವುದಕ್ಕೆ ಹೋದರೆ ಕೊಜೆಂಟ್ರಿಕ್ಸ್ ಬರುವುದಕ್ಕೆ ನಾಲ್ಕು ವರ್ಷ ಬೇಕು. ನಾಲ್ಕು ವರ್ಷದಲ್ಲಿ ಇವರು ಮೂರು ಸಾವಿರ ಪೋಲೀಸರನ್ನು ಇಟ್ಟುಕೊಂಡು ಮಾಡುವುದಕ್ಕಾಗುತ್ತದೆಯೇ? ಹಾಗಾದರೆ ಜನಪ್ರತಿನಿಧಿಗಳ ಮಾತು ಇವರಿಗೆ ಬೇಡ. ನಾವು ಹೇಳುವುದೆಲ್ಲಾ ಸುಳ್ಳು. ನಾವುಹಿತಾಸಕ್ತಿಗಳು ಎಂದು ಒಂದೇ ಮಾತಿನಲ್ಲಿ ಇವರು ಹೇಳಿಬಿಡುತ್ತಾರೆ. ನಾನು ಆ ದಿವಸವೇ ಹೇಳಿದೆ; ಹೊಳೆನರಸಿಪುರದಲ್ಲಿ 500 ಮೆಗಾವ್ಯಾಟ್‌ದ್ದು ಒಂದು ಹಾಕಿ. ಹಾಸನದಲ್ಲಿ ಹಾಕಿ, ಶಿವಮೊಗ್ಗದಲ್ಲಿ ಹಾಕಿ ಎಂದು ಹೇಳಿದೆ.

ಇವರಿಗೆ ಅದು ಬೇಡ. ಇವರು ಹೇಳುತ್ತಾರೆ, ಹಾಸನದಲ್ಲಿ ಏನು ಸಮುದ್ರ ಬರುತ್ತದೆಯೇ ಎಂದು ಕೇಳುತ್ತಾರೆ, ರಾಯಚೂರಿನಲ್ಲಿ ಸಮುದ್ರ ಬರುತ್ತದೆಯೇ? ರಾಯಚೂರಿನಲ್ಲಿ ಥರ್ಮಲ್ ಪ್ಲಾಂಟ್ ಆಗಲಿಲ್ಲವೇ? ಸಮುದ್ರ ಬಂದರೆ ಥರ್ಮಲ್ ಪ್ಲಾಂಟ್ ಆಗುತ್ತದೆಯೇ...

ಮಾನ್ಯ ಸದಸ್ಯರು: ಶಿವಮೊಗ್ಗದಲ್ಲಿಯೂ ಸಮುದ್ರ ಇಲ್ಲ. ಅಲ್ಲಿ ಶರಾವತಿ, ಚಕ್ರ ವರಾಹಿ ಎಲ್ಲಾ ಆಗಿಹೋಗಿಬಿಟ್ಟಿದೆ.

ಶ್ರೀ ಯು.ಆರ್. ಸಭಾಪತಿ: ಆದ್ದರಿಂದ ನಾನು ಸ್ಪಷ್ಟವಾಗಿ ಹೇಳುತ್ತಾ ಇದ್ದೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3 ಲಕ್ಷ ಜನ ಬಡ ಮೀನುಗಾರರಿದ್ದಾರೆ. ಇವತ್ತು ಆ ಮೀನುಗಾರಿಕೆ ಸೀಗಡಿ ಕೃಷಿಯ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಕೊಟ್ಟ ತೀರ್ಮಾನ ಏನೆಂದು ತಮಗೆ ಗೊತ್ತಿದೆ. ಸರ್ಕಾರದ ವತಿಯಿಂದಲೇ ಸೀಗಡಿ ಕೃಷಿ ಬಗ್ಗೆ ತರಬೇತಿಯನ್ನು ಕೊಟ್ಟು, ಸರ್ಕಾರದಿಂದಲೇ ಶಿಫಾರಸ್ ಮಾಡಿದಂಥ ವ್ಯಕ್ತಿಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳು ಲಕ್ಷಗಟ್ಟಲೆ, ಕೋಟಿಗಟ್ಟಲೆ ಹಣವನ್ನು ಕೋಟ್ಟು, ಸರ್ಕಾರವೇ ಅವರಿಗೆ ಬೇಕಾದಂಥ ಸ್ಥಳವನ್ನು ಕೊಟ್ಟು, ಇವತ್ತು ಆ ಸೀಗಡಿ ಕೃಷಿಯನ್ನು ವಿರೋಧಿಸಿ, ಸರ್ವೋಚ್ಚ ನ್ಯಾಯಾಲಯ ಏನು ತೀರ್ಮಾನ ಕೈಗೊಂಡಿದೆ. ಅವರಿಗೆ ಪುನರ್ ವಸತಿ ಯಾವರೀತಿ ಮಾಡುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಒಂದಿಷ್ಟಾದರೂ ಮಾರ್ಗದರ್ಶನ ಕೊಟ್ಟಿದ್ದೀರಾ? ಇಲ್ಲ. ಇವತ್ತು ಅವರ ಬಗ್ಗೆ ಪುನರ್ ವಸತಿಯಾಗಬೇಕು. ಸರ್ವೋಚ್ಚ ನ್ಯಾಯಾಲಯ ಏನು ತೀರ್ಮಾನ ತೆಗೆದುಕೊಂಡಿದೆ, ಇವತ್ತು ಸೀಗಡಿ ಕೃಷಿಯಿಂದ ಆಗುವಂಥ ಹಾನಿ ಏನಿದೆ ಎನ್ನುವುದನ್ನು ಸ್ಪಷ್ಟಪಡಿಸಿ, ಸರ್ವೋಚ್ಚ ನ್ಯಾಯಾಲಯ ಮಾರ್ಚ್ 31 ರೊಳಗಾಗಿ ಈ ಕೃಷಿ

ಕೇಂದ್ರಗಳನ್ನು ಖಾಲಿ ಮಾಡಿಸಬೇಕೆಂದು ಆದೇಶ ಕೊಟ್ಟಿದೆ. ಅವರಿಗೆ ಪುನರ್ ವಸತಿ ಮಾಡುವ ಬಗ್ಗೆ ಸರ್ಕಾರ ಏನು ನಿರ್ದೇಶನ ಕೊಡುತ್ತದೆನ್ನುವುದನ್ನು ನಾನು ತಮ್ಮ ಮೂಲಕ ಕೇಳಬಯಸುತ್ತೇನೆ. ಕಲೆದ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಸಾರಾಯಿ ನಿಷೇಧದ ಬಗ್ಗೆ ಮಾತು ಇತ್ತು. ಈ ಸಲ ರಾಜ್ಯಪಾಲರ ಭಾಷಣದಲ್ಲಿ ಸಾರಾಯಿ ನಿಷೇಧದ ಮಾತಿಲ್ಲ. ಅದು ಏಕೆಂದು ನನಗೆ ಗೊತ್ತಾಗಲಿಲ್ಲ. ಒಂದುಕಡೆಯಿಂದ ಸಂಪೂರ್ಣ ಮಧ್ಯಪಾನವನ್ನು ಹಂತ ಹಂತವಾಗಿ ನಿಷೇಧ ಮಾಡುತ್ತೇವೆಂದು ಹೇಳಿ, ಇನ್ನೊಂದುಕಡೆಯಿಂದ ಸಾರಾಯಿ ಮಾತ್ರ ನಿಷೇಧ. ವೈನ್ ಶಾಪುಗಳ ಅರ್ಜಿ ಸ್ವೀಕಾರ ಆಗುತ್ತಾ ಇದೆ. 700-800 ವೈನ್ ಶಾಪುಗಳ:ಹೊಸದಾಗಿ ಕೊಡಲಿಕ್ಕೆ ಅರ್ಜಿಗಳ ಆಗಾಗಲೇ ಸ್ವೀಕಾರ ಮಾಡಿದ್ದಾರೆ. ಇದೇನು ಇವರ ರಾಜಕಾರಣ? ಇವರ ಸರ್ಕಾರ ಯಾವರೀತಿಯಲ್ಲಿ ಹೋಗುತ್ತಾ ಇದೆ. ಇವರು ಸಾರಾಯಿ ನಿಷೇಧ ಮಾಡಲಿ. ಇವತ್ತು ಸಾರಾಯಿ ಮಾರಾಟ ಮಾಡಿಕೊಂಡಿರತಕ್ಕ ವೆಂಡರ್ಸ್ ಯಾರಿದ್ದಾರೆ, ಆ 3 ಲಕ್ಷ ಜನ ಮಾರಾಟಗಾರರು ಏನಿದ್ದಾರೆ, ಅವರ ಪುನರ್ ವಸತಿ ಬಗ್ಗೆ ಈ ಸರ್ಕಾರ ಏನಾದರೂ ಚಿಂತನೆ ನಡೆಸಿದೆಯೇ? ಅವರ ಬಗ್ಗೆ ಪ್ರಾಮಾಣಿಕವಾಗಿರಾಜ್ಯಪಾಲರ ಭಾಷಣದಲ್ಲಿ ಏನಾದರೊಂದು ನಮೂದಿಸಿದ್ದೀರಾ? ನಿಮಗೆ ಖುಷಿ ಬಂದಹಾಗೆ, ಒಬ್ಬರು ಹೇಳಿದರು ಸಾರಾಯಿ ನಿಷೇಧ ಮಾಡುವುದು ಅಷ್ಟು ಸುಲಭವಲ್ಲ ಎಂದು ಹೇಳಿದರು. ಮತ್ತೊಬ್ಬರು ಹೇಳಿದರು ಸಾರಾಯಿ ನಿಷೇಧ ಮಾಡಿದರೆ, ನಮ್ಮ ಆರ್ಥಿಕ ಹೊರೆಯನ್ನು ಹೇಗೆ ತುಂಬಲಿ ಎಂದು ಹೇಳಿದರು. ಇನ್ನೊಬ್ಬರು ಹೇಳಿದರು, ಸಾರಾಯಿ ನಿಷೇಧ ಮಾಡುವುದಿಲ್ಲ. ಯಾರು ನಿಮಗೆ ಹೇಳಿದರು ಎಂದರು. ನಾನು ಒಂದು ಮನವಿಯನ್ನು ಮುಖ್ಯಮಂತ್ರಿಗಳಿಗೆ ಕೊಡಲಿಕ್ಕೆ ಹೋಗಿದ್ದೆ. ಸಾರಾಯಿ ವೆಂಡರ್ಸ್‌ಗಳ ಮನವಿಯನ್ನು ಹಿಡಿದುಕೊಂಡು ಹೋದಾಗ, ಅವರ ಕಡೆಯವರ ಮಂತ್ರಿಗಳೇ, ಯಾರು ಎಂದು ನಾನು ಹೇಳಬಯಸುವುದಿಲ್ಲ. ಅವರು ಹೇಳಿದರು, ಯಾರು ಮಾಡುತ್ತಾರೆ ಎಂದು ನನ್ನ ಹತ್ತಿರ ಅವರು ಕೇಳಿದರು. ಬಹಳ ಸುಲಭದಲ್ಲಿ ಹೇಳಿದರು. ಯಾರು ಮಾಡುತ್ತಾರೆ ಎಂದು. ನನಗೆ ಆಶ್ಚರ್ಯವಾಯಿತು. ಈ ಬಾರಿಯ ರಾಜ್ಯಪಾಲರ ಭಾಷಣದ ಪ್ರತಿಯಲ್ಲಿ ಸಾರಾಯಿ ನಿಷೇಧದ ಬಗ್ಗೆ ಯಾವುದೇ ಮಾತಿಲ್ಲ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಒಂದು ನಿರ್ದಿಷ್ಟವಾದ ಕಾರ್ಯಕ್ರಮಗಳು ಈ ಸರ್ಕಾರಕ್ಕೆ ಇಲ್ಲ. ರಾಜಕೀಯ ಇಚ್ಛಾಶಕ್ತಿ ಎಂಬುದು ಈ ಸರ್ಕಾರಕ್ಕೆ ಇಲ್ಲ. ನಮ್ಮ ಸರ್ಕಾರ ಇದೇ ರೀತಿಯಲ್ಲಿ ಹೋಗಬೇಕು, ನಮ್ಮ ಸರ್ಕಾರ ನಮ್ಮ ರಾಜ್ಯದ ಜನತೆಗೆ ಇದೇ ರೀತಿಯ ವಚನ ಕೊಡಬೇಕೆನ್ನುವಂತಾದ್ದು ಅವರಲ್ಲಿ ಇಲ್ಲ. ಹೇಗೆ ಬೇಕಾದರೆ ಹಾಗೆ. ಯಾವರೀತಿಯಲ್ಲಿ ಹೋದರೂ ಆಗುತ್ತದೆ. ಅವರಲ್ಲಿ ಒಬ್ಬ ಸಚಿವರು, ಇನ್ನೊಬ್ಬರು ಸಚಿವರನ್ನು ನೋಡುವುದಕ್ಕೆ ಆಗುವುದಿಲ್ಲ. ಮತ್ತೊಂದು ಸಲ ಅವರಿಬ್ಬರು ಒಂದೇ ಮನೆಯಲ್ಲಿ ಕಾಫಿ ಕುಡಿಯುತ್ತಾರೆ. ಇದೆಂತಹ ವಿಚಾರವೆಂದು ನಮಗೆ ಅರ್ಥವೇ ಆಗುವುದಿಲ್ಲ. ಒಂದೊಂದು ಚುನಾವಣೆಯಲ್ಲಿ ಒಬ್ಬೊಬ್ಬರು ಬೇರೆ ಬೇರೆ ಕಡೆ ಇರುತ್ತಾರೆ. ಅದು ಬಹಳ ಆಶ್ಚರ್ಯ. ಆಶ್ರಯ ಯೋಜನೆ ವಿಚಾರದಲ್ಲಿ ಮಾನ್ಯ ಪ್ರತಾಪಚಂದ್ರಶೆಟ್ಟರು ಮಾತನಾಡುವಾಗ ನಿಮಗೆಲ್ಲಾ ಸಿಟ್ಟು ಬಂತು. ಆಶ್ರಯದಲ್ಲಿ ಇವರೇನು ಮಾಡಿದ್ದು? ಆಶ್ರಯ ಸ್ಕೀಮ್‌ನಲ್ಲಿ ಇವರು ಮಾಡಿದ್ದೇನು? ನಾವು ಇಲ್ಲಿ ಆರ್ಡರ್ ತಂದಿದ್ದೇನೆ. ಇಲ್ಲಿಂದ ಆದೇಶ ಆಗಿದೆ. ಇವರು ಯಾವರೀತಿ ನಿಯಮಾವಳಿ ಮಾಡುತ್ತಾರೆ. ಬಾಕಿ ಪಾರ್ಟಿಯವರಾದ ನಾವೆಲ್ಲಾ ಶಾಸಕರೇ ಅಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯದೇ

ಹೇಳುತ್ತೇನೆ. ಬೇರೆ ಯಾವುದೂ ಬೇಡ. ನಮ್ಮ ಸಚಿವರಾದ ರೇವಣ್ಣನವರು ಸದನದಲ್ಲಿ ಇಲ್ಲ. ಅವರು ಕಳೆದ ಅಧಿವೇಶನದಲ್ಲಿ ನನಗೊಂದು ಮಾತು ಕೊಟ್ಟಿದ್ದರು ನಮ್ಮ ಉಡುಪಿ ನಗರ ಸಭೆ, ಸಣ್ಣ ಪುರಸಭೆಯಾಗಿತ್ತು. 5 ಗ್ರಾಮ ಪಂಚಾಯ್ತಿಗಳು, ಪುತ್ತೂರು, ಹೆರ್ಗ, ಶಿವಳ್ಳಿ ಮತ್ತು ಬೈಲೂರು ಮತ್ತೆ ಮಲ್ಪೆ. ಈ ಗ್ರಾಮಪಂಚಾಯ್ತಿಗಳು ಮೂರು ವರ್ಷದಿಂದ ಅಧಿಸೂಚಿತ ಪ್ರದೇಶಗಳಾಗಿವೆ. ಈ ಅಧಿಸೂಚಿತ ಪ್ರದೇಶ ಆದಂದಿನಿಂದ ಆ 5 ಗ್ರಾಮಗಳಿಗೆ ಆಶ್ರಯ ಸ್ಕೀಮು ಇಲ್ಲ, ಯಾವ ಸ್ಕೀಮುಗಳೂ ಇಂಪ್ಲಿಮೆಂಟೇಷನ್ ಇಲ್ಲ. ನಾನು ಇದನ್ನು ವಿಧಾನ ಸಭೆಯಲ್ಲಿ ಪ್ರಸ್ತಾಪನೆ ಮಾಡಿದೆ. ಆಗ ಮಾನ್ಯಸಚಿವರು ಹೇಳಿದರು. ಈ ಸಲ ನಿಮಗೆಷ್ಟು ಕೊಡುತ್ತೇವೆಯೋ ಅದಕ್ಕಿಂತ ಹೆಚ್ಚು ಕೊಡುತ್ತೇವೆಂದು ಹೇಳಿದರು. 500ಕ್ಕೆ 500 ಕೊಡುತ್ತೇವೆಂದು ಹೇಳಿದರು. ಇಡೀ ವಿಸ್ತೃತ ಉಡುಪಿ ನಗರಸಭೆಗೆ 500 ಮನೆಗಳಿಗೆ ಆಶ್ರಯ ಸ್ಕೀಮ್‌ನಲ್ಲಿ ಸ್ಯಾಂಕ್ಷನ್ ಮಾಡಿದರು. ನಾನು ಒಂದು ಸಾವಿರ ಕೇಳಿದ್ದೆ. ಅಲ್ಲಿಗೆ 4 ಲಕ್ಷ ರೂ. ಕೊಟ್ಟಿದ್ದಾರೆ. 500 ಮನೆಗಳನ್ನು ಈ 4 ರೂ.ನಲ್ಲಿ ಕಟ್ಟುವುದಕ್ಕೆ ಸಾಧ್ಯವಾಗುತ್ತದೆಯೇ? 1994-95ನೇ ಸಾಲಿನಲ್ಲಿ ಈ ಪ್ರಶ್ನೆಯೇ ಇಲ್ಲ. ಅವರೆಲ್ಲರೂ ಅರ್ಧಂಬರ್ಧ ಕಟ್ಟಿ, ಅವರ ಅವಸ್ಥೆ ದೇವರೇ ಗತಿ. ನಿಮಗೊಂದು ಆದೇಶವನ್ನು ತೋರಿಸುತ್ತೇನೆ. ಕಳೆದ ವರ್ಷ ವಿಧಾನ ಸಭೆಯ ಅಧಿವೇಶನದಲ್ಲಿ ಮೀನುಗಾರಿಕಾ ಸಚಿವರು, ಮೀನುಗಾರಿಕಾ ಮನೆಗಳನ್ನು ಕೊಟ್ಟಬಗ್ಗೆ ಹೇಳುತ್ತೇನೆ. ಕರ್ನಾಟಕ ಸರ್ಕಾರದ ನಡಾವಳಿಗಳು. ಗ್ರಾಮೀಣ ಪ್ರದೇಶದ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ 1996-97ನೇ ಸಾಲಿನಲ್ಲಿ ಆಶ್ರಯ ಯೋಜನೆಯ ಕಾರ್ಯಕ್ರಮದ ಅಡಿಯಲ್ಲಿ ಗುರಿಯನ್ನು ನಿಗದಿಪಡಿಸುವ ಬಗ್ಗೆ. ನಾನು ಹೆಚ್ಚು ವಿವರ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ನಮ್ಮ ಮಾನ್ಯ ಸಚೇತಕರ ಊರಿಗೆ 100 ಮನೆಗಳನ್ನು ಕೊಟ್ಟಿದ್ದಾರೆ. ಆಮೇಲೆ ಬ್ರಹ್ಮಾವರ, ಸಚಿವರಾದ ಜಯಪ್ರಕಾಶ ಹೆಗಡೆಯವರ ಊರಿಗೆ 200 ಮನೆಗಳನ್ನು ಕೊಟ್ಟಿದ್ದಾರೆ. ಆಮೇಲೆ ಮೂಡಬಿದ್ರಿ ಅಮರನಾಥ ಶೆಟ್ಟರ ಊರಿಗೆ 100 ಮನೆಗಳು, ಪುತ್ತೂರಿನಲ್ಲಿ 100 ಮನೆಗಳನ್ನು ಕೊಟ್ಟಿದ್ದಾರೆ, ಅದು ಯಾವ ಉದ್ದೇಶ ಎಂದು ಗೊತ್ತಾಗಲಿಲ್ಲ. ಅಲ್ಲಿ ಬಿ.ಜೆ.ಪಿ.ಯವರು ಇದ್ದಾರೆ. ಈಗ ನಾನು ಕೇಳುತ್ತಾ ಇರುವುದು, ಉಡುಪಿ ನಗರಸಭೆಗೆ 500 ಮನೆಗಳನ್ನು ಹೆಚ್ಚಿಗೆ ಕೊಡುತ್ತೇನೆಂದು ಹೇಳಿದವರು ಏಕೆ ಉಡುಪಿ ಬಿಟ್ಟರು. ರಾಜಕಾರಣ ಮಾಡುವುದಕ್ಕೆ ಈ ರೀತಿ ಮಾಡಿದ್ದಾರೆ. ಈ ವಿಚಾರದಲ್ಲಿ ಮಾತ್ರವಲ್ಲ, ಎಲ್ಲಾ ವಿಚಾರದಲ್ಲೂ ಸಮಾನತೆಯನ್ನು ಮಾಡಬೇಕು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ನಾಳೆ ನಮ್ಮ ಸರ್ಕಾರ ಆ ಕಡೆ ಬರಬಹುದು. ಆಗ ನೀವು ನಮ್ಮನ್ನು ಕೇಳಬಹುದು. ನೀವು ಉತ್ತರ ಹೇಳಲು ಸಮರ್ಥರಿರಬಹುದು. ಮಾತು ಮಾತಿಗೂ ಹೇಳುತ್ತೀರಿ. ನೀವೇನು ಮಾಡಿದ್ದಿರಿ, ನೀವೇನು ಮಾಡಿದ್ದಿರಿ ಎಂದು ಹೇಳುತ್ತೀರಿ. ಅದಕ್ಕಾಗಿ ನಾವು ಇಲ್ಲಿ ಬಂದು ಕುಳಿತಿದ್ದೇವೆ. ನಾವು ಮಾಡಿದ ತಪ್ಪನ್ನು ನೀವು ಮಾಡಬೇಕೆ? ನೀವು ಈ ತಪ್ಪು ಮಾಡಬಾರದೆಂದೇ ಜನ ನಿಮ್ಮನ್ನು ಅಲ್ಲಿಗೆ ಕಳುಹಿಸಿದ್ದಾರೆ. ಈ ರೀತಿಯ ನ್ಯಾಯ ನಮಗೆ ಬೇಕಾಗಿಲ್ಲ. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇದರ ಜೊತೆಗೆ ಬೆಳಿಗ್ಗೆ ಇನ್ನೊಂದು ವಿಚಾರವನ್ನು ಹೇಳಿದೆ. ಪಾದುಕಾ ಕ್ಷೇತ್ರ. ಉಡುಪಿಯಲ್ಲಿ ಪುಣ್ಯಕ್ಷೇತ್ರ ಬಹಳಷ್ಟು ಇದೆ. ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವು ಗುತ್ತಿಗೆದಾರರು ಇದ್ದಾರೆ. ಈ ಗುತ್ತಿಗೆದಾರರಿಗೆ ಆ ಬಂಡೆ ಒಡೆಯುವುದಕ್ಕೆ ಪಾದುಕಾ ಕ್ಷೇತ್ರ ಕಳೆದ 5-6 ವರ್ಷಗಳಿಂದ

ಸಾರ್ವಜನಿಕ ಪ್ರತಿನಿಧಿಗಳು ಯಾರು ತಹಶೀಲ್ದಾರರು ಹೇಳಿದರೆ. ಅವರು ನಿಮ್ಮ ಮಂತ್ರಿಗಳು ಏನು ಹೇಳಿದರು. ಅಲ್ಲ ಏನ್ನೂ ನಡೆಯುವುದಿಲ್ಲವೆಂದು ಹೇಳಿದರು. ಅದನ್ನೇ ತಹಶೀಲ್ದಾರರು ಹೇಳಿದರು. ಮೊನ್ನೆ ಅಲ್ಲಿಯೂ ಒಂದು ಗಲಾಟೆಯಾಯಿತು. ಆ ಸುತ್ತಮುತ್ತಲಿನ ಪ್ರದೇಶವನ್ನು ಚಿಲ್ಲಾಪಿಲ್ಲಿ ಮಾಡಿ, ಬಾಂಬ್ ಸ್ಫೋಟದಿಂದ ಒಬ್ಬ ಸತ್ತಿದ್ದಾನೆ. ಇದನ್ನು ಸಾರಿ. ಸಾರಿ ಹೇಳಿದರೂ ಕೂಡ ಜಿಲ್ಲಾಧಿಕಾರಿಗಳು ಕೊನೆಯದಾಗಿ ಒಂದು ಮಾತು ಹೇಳಿದರು. ಈ ಬಾರಿ ಮಾರ್ಚಿ ನಂತರ ಯಾವುದೇ ಗುತ್ತಿಗೆದಾರರಿಗೆ ಗುತ್ತಿಗೆ ಮಾಡುವುದಕ್ಕೆ ನಾವು ಶಿಫಾರಸ್ ಮಾಡುವುದಿಲ್ಲವೆಂದು ಹಾಗಾದರೆ ಸರ್ಕಾರದ ನೀತಿ ನಿಯಮಗಳು ಏನಿದೆ ಎಂದು ಈ ಸಭೆಯಲ್ಲಿ ಮುಖ್ಯಮಂತ್ರಿಗಳು ಸ್ಪಷ್ಟವಾದ ತೀರ್ಮಾನವನ್ನು ಹೇಳಬೇಕಾಗುತ್ತದೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮ್ಮನ್ನು ಇವರು ಸಂಪೂರ್ಣ ನಾಶ ಮಾಡಲಿಕ್ಕೆ ಹೊರಟ ಹಾಗೆ ಇದೆ. ಇವರಿಗೆ ಗೊತ್ತಿದೆ. ಅಲ್ಲಿ ಜನತಾ ದಳ ಬರುವುದಿಲ್ಲವೆಂದು ನನಗೆ ಅನುಮಾನ. ಮಾನ್ಯ ವಸಂತ ಬಂಗೇರ ಅವರು ಅವರ ವೈಯಕ್ತಿಕ ನೆಲೆಯಲ್ಲಿ ಗೆದ್ದು ಬರಬಹುದು. ದಕ್ಷಿಣ ಕನ್ನಡ ಜಿಲ್ಲೆಯನ್ನು ಅಧಃಪತನಕ್ಕೆ ತಗೆದುಕೊಂಡುಹೋದ ಸರ್ಕಾರವೆಂದರೆ ಜನತಾದಳ ಸರ್ಕಾರವಲ್ಲದೇ ಬೇರೆ ಅಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಅವರಿಗೆ ಎಲ್ಲಾ ವಿಚಾರ ಗೊತ್ತಿದೆ ನಾವು ಅವರಿಗೆ ಹೇಳಿದ ಕೂಡಲೇ ನಾನು ಏನು ಮಾಡಲಿ, ನಾನು ಸಚೇತಕ ಎಂದು ಹೇಳುತ್ತಾರೆ. ಅವರು ಏನು ಮಾಡುವುದು ಪಾಪ ಅವರಿಗೆ ಒಂದು ಪಧವಿ ಕೊಟ್ಟಿದ್ದೀರಲ್ಲ. ಅವರು ಇನ್ನೇನು ಮಾಡುವುದು ಅವರು ಅದನ್ನೇ ಹೇಳಿಕೊಂಡು ಬರಬೇಕು. ಆದ್ದರಿಂದ ನಾನು ಹೇಳುತ್ತೇನೆ ಇವತ್ತು ಮೂರು ಲಕ್ಷ ಮೀನುಗಾರರನ್ನು ಬೀದಿಪಾಲು ಮಾಡುವುದಾಗಲಿ ನಮ್ಮ ಜಿಲ್ಲೆಯ ಜನಗಳ ಇಚ್ಛೆಗೆ ವಿರುದ್ಧವಾಗಿ ಬಹುರಾಷ್ಟದ ಕೈಗಾರಿಕೆಗಳನ್ನು ಬಹುರಾಷ್ಟೀಯ ಕಂಪನಿಗಳಿಗೆ ನಮ್ಮ ಜಿಲ್ಲೆಯನ್ನು ಮಾರಾಟ ಮಾಡುತ್ತೇವೆಂದು ಆದರೆ ಇವತ್ತು ಬಾರ್ಜ್ ಮಾರಿಟ್ ಜನರೇಟರ್ಸ್ನು ತರಿಸಿ ಮೀನುಗಾರರು ಇರುವಂತಹ ಪ್ರದೇಶದಲ್ಲಿ ನೀವು ಜನರೇಟರ್ಸನ್ನು ತರಿಸಿ ಇಡುತ್ತೇವೆಂದು ಹೇಳುವುದಾದರೆ ಮೊನ್ನೆ ನಮ್ಮ ಅಧಿಕಾರಗಳ ಒಂದು ಟೀಮ್ ಫಿಲಿಫೈನ್ಸಗೆ ಹೋಗಿದ್ದಾರೆ. ನಾನು ಸಭೆ ಕಮಿಟಿಯಲ್ಲಿ ಆ ವರದಿ ಕೊಡಿ ಎಂದು ಆ ವರದಿ ಇನ್ನೂ ಬರೆದಿಲ್ಲ. ನಮ್ಮ ಅಧಿಕಾರಿಗಳನ್ನು ಕರೆದುಕೊಂಡು ಹೋಗುತ್ತಾರೆ. ಅವರು ಜಪಾನ್‌ಗಳಲ್ಲಿ ಇಂಟರ್‌ನ್ಯಾಷನಲ್ ಹೋಟೆಲ್‌ಗಳಲ್ಲಿ ಕೂರಿಸಿ ವರದಿ ಕೊಡುತ್ತಾರೆ ನಮಗೆ ಜನರೇಟರ್ಸ್‌ಗಳಲ್ಲಿ ಏನೂ ಶಬ್ಧ ಬರುವುದಿಲ್ಲ ಹಾಗೆ ಹೇಗೆ ಎಂದು ಕೇಳಿ. ಬಾರ್ಜಿಮ ಜನರೇಟರ್ಸ್ ಎಲ್ಲಿ ಅಳವಡಿಸಿದ್ದಾರೋ ಅಲ್ಲಿ ಶಿಪ್ಪನ್ನು ತಂದು ಅದರ ಮೇಲೆ ಜನರೇಟರ್ಸ್‌ನ್ನು ಅಳವಡಿಸಿದರೆ ಸಾಮಾರು 25 ಕಿಲೋಮೀಟರ್‌ನಲ್ಲಿ ಮೀನುಗಾರಿಗೆಯನ್ನು ನಿಷೇಧಮಾಡಬೇಕಾಗಿದೆ. ಹಾಗಾದರೆ ಮೀನುಗಾರರು ಎಲ್ಲಿ ಹೋಗಬೇಕು ಎನ್ನುವುದನ್ನು ಇವರು ಸ್ಪಷ್ಟಪಡಿಸಬೇಕು ಮಾತು ಎತ್ತಿದರೆ ನಿಮಗೆ ವಿದ್ಯುತ್ ಬೇಡವೇ ನಿಮಗೆ ಉದ್ಯೋಗ ಬೇಡವೇ ಎನ್ನುವ ಮಾತನ್ನು ಇಟ್ಟುಕೊಂಡು ನೀವು ಬಹುರಾಷ್ಟೀಯ ಕಂಪನಿಗಳಿಗೆ ನಮ್ಮ ಜಿಲ್ಲೆಯನ್ನು ದಯವಿಟ್ಟು ಮಾರಾಟ ಮಾಡಲಿಕ್ಕೆ ಹೋಗಬೇಡಿ. ಈ ಎಚ್ಚರಿಕೆಯ ಮಾತನ್ನು ಹೇಳುವುದರೊಂದಿಗೆ ಮಾನ್ಯ ಅಧ್ಯಕ್ಷರೇ, ಇವತ್ತು ಈ ರಾಜ್ಯದ ಜನತೆ ಈ ಸರ್ಕಾರದೊಂದಿಗೆ ಬಹಳಷ್ಟು ಅಪೇಕ್ಷನ್ನು ಇಟ್ಟುಕೊಂಡಿದ್ದರು. ಈ ರಾಷ್ಟದ ಜನತೆ ಕೂಡ ಇವರ ಪಕ್ಷದೊಂದಿಗೆ ಬಹಳಷ್ಟು ಅಪೇಕ್ಷೆಯನ್ನು ಇಟ್ಟುಕೊಂಡಿದ್ದರು. ನಮ್ಮ ಪಕ್ಷ ಇವರಿಗೆ

ಬೆಂಬಲ ಕೊಟ್ಟಿದ್ದು ಹೌದು ಇಲ್ಲ ಎಂದು ಹೇಳುವುದಿಲ್ಲ. ಕೋಮುವಾದ ಬಿ.ಜೆ.ಪಿ ಅಧಿಕಾರಕ್ಕೆ ಬರುವುದುಬೇಡ ಎನ್ನುವ ಒಂದೇ ದೃಷ್ಟಿಯಿಂದ ನಾವು ಕೊಟ್ಟಿದ್ದು ವಿನಹ: ಯಾವುದೇ ಉದ್ದೇಶದಿಂದಲೂ ಅಲ್ಲ. ಮಾನ್ಯ ರಾಮಕೃಷ್ಣರವರು ನಿನ್ನೆ ಹೇಳಿದರು ಅವರು ನೀವೂ ಆಲಿಂಗನ ಮಾಡುತ್ತೀರಿ ಎಂದು ಅವರಿಗೇನು ಮಾಡಲಿಕ್ಕೆ ಇವರು ಹೋಗುತ್ತಿದ್ದರು ಎಲ್ಲಾ ಕಡೆ ಆದರೆ ಇವರನ್ನು ಅವರಿಗೇನು ಮಾಡು ಅವರೇ ಇಲ್ಲ. ಈಗ ಇವರು ದೊಬ್ಬೆ ಹೊಡೆಯುತ್ತಾರೆ ನೀವು ಆಲಿಂಗನ ಮಾಡುತ್ತೀರಿ ಆಲಿಂಗನ ಮಾಡುತ್ತೀರಿ ಎಂದು ಏಕೆಂದರೆ ಅಲ್ಲಿ ನೀವು ಮಾಯಾವತಿ ಜೊತೆ ಅವರಿಗೆನ ಮಾಡಲ್ಲಿಲ್ಲ ನೀವು ನಮಗೆ ಏಕೆ ಹೇಳುತ್ತೀರಿ. ನೀವು ಕೇಳುವವರು ಸ್ವಲ್ಪ ಸಂಭಾವಿತರಾಗಿರಬೇಕು. ನಿಮ್ಮನ್ನು ನೀವು ವರವೆ ಮಾಡಿಕೊಂಡು......

ಶ್ರೀ ಕೆ .ಎಸ್. ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ ಮಾನ್ಯ ಸಭಾಪತಿಯವರು ಯಾವ ಪಕ್ಷದಿಂದ ಊರುವಳಿಯಾಗಿದ್ದಾರೆಂದು ಮೊದಲು ಕೇಳಿ. ಮೊದಲು ಇವರು ಯಾವ ಪಕ್ಷದಿಂದ ಗೆದ್ದಿದ್ದಾರೆ ಎಂದು ಕೇಳಿ. ನೀವು ಊಡಿಕೆ ಮಾಡಿಕೊಂಡಿದ್ದೀರಿ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ: ನೀವು ಎಲ್ಲೆಲ್ಲಿ ಸೀರೆ ಉಟ್ಟುಕೊಂಡು ಹೋಗಿದ್ದೀರಿ ಎನ್ನುವುದು ನಮಗೂ ಗೊತ್ತಿದೆ. ಅದನ್ನು ತಾವು ಹೇಳಬೇಕಾಗಿಲ್ಲ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇವರು ಎಂಬಾಸ್ ಮಾಡುವುದೇ ಒಂದು ದೊಡ್ಡ ರೋಗ.

(ಗೊಂದಲ)

ಶ್ರೀ ಹೆಚ್.ಡಿ ಬಸವರಾಜು: ಇವರು ಜನತೆಯ ಮುಂಚೆ ವಾಗ್ದಾನ ಕೊಟ್ಟು ಕೆ.ಸಿ ಪಿ ಯಿಂದ ಗೆದ್ದಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು: ತಾವು ಕೂರಿ.

ಶ್ರೀ ಹೆಚ್.ಡಿ. ಬಸವರಾಜು: ಇವರು ಇಲ್ಲಿ ಈ ರೀತಿ ಮಾತನಾಡುವುದಕ್ಕೆ ಸೈದ್ಯಾಂತಿಕವಾದ ನೆಲೆ ಏನು ಇದೆ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: 1977ರಲ್ಲಿ ಅವರು ಕೇಂದ್ರದಲ್ಲಿ ಅವಳಿಜವಳಿ ಆಗಿ ಇದ್ದರು. ಈಗ ಇಲ್ಲಿ ಈ ರೀತಿ ಮಾತನಾಡುತ್ತಾರೆ. ಇದಕ್ಕೆ ಅರ್ಥ ಇದೆಯೇ?

ಉಪಾಧ್ಯಕ್ಷರು: ಸಭಾಪತಿಯವರೇ, ತಾವು ಮುಗಿಸಿ.

(ಗೊಂದಲ)

ಶ್ರೀ ವೈ.ರಾಮಕೃಷ್ಣ: ಅವರು ಎಷ್ಟೇ ಹೇಳಿದರೂ ಸಹ ನಿಜವಾದ ವಿರೋದ ಪಕ್ಷ ನಮ್ಮದೇ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ: ಮಾನ್ಯ ಅಧ್ಯಕ್ಷರೇ, ನಾನು ಬಿಜೆಪಿ ಅಭ್ಯರ್ಥಿ ವಿರುದ್ಧವೇ ಗೆದ್ದು ಬಂದವನು. ನಿಜವಾದ ವಿರೋಧಪಕ್ಷ ಅವರು ಆಗುವುದಕ್ಕೆ ನಾನೂ ಸಹ ಬಿಜೆಪಿ ಅಭ್ಯರ್ತಿ ವಿರುದ್ಧವೇ ಗೆದ್ದು ಬಂದಿರುವುದು. ಅವರನ್ನು ಹಿಂದಿನ ಬಾಗಿಲಿನಲ್ಲಿ ಮೇಲ್ಮನೆಗೆ ಕಳುಹಿಸಿರಬಹುದು. ಸೈದ್ಧಾಂತಿಕದ ಬಗ್ಗೆ ಹೇಳುವುದಕ್ಕೆ ಇವರಿಗೆ ಹಕ್ಕು ಇಲ್ಲ. ಯಾವಾಗ ಇವರು ಮಾಯಾವತಿಯನ್ನು ಅಪ್ಪಿಕೊಂಡರೋ ಆಗ ಇವರಿಗೆ ಸೈದ್ಧಾಂತಿಕ ಹಕ್ಕು ಎಲ್ಲಿದೆ?

(ಗೊಂದಲ)

ಉಪಾಧ್ಯಕ್ಷರು: ತಾವು ದಯಮಾಡಿ ಕೊಡಿ. ಅವರು ಮಾತನಾಡುವುದ್ಕಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: 15 ಪರ್ಸೆಂಟ್ ಓಟು ತೆಗೆದುಕೊಂಡವರಲ್ಲಿ ಕೂತಿದ್ದಾರೆ 21 ಪರ್ಸೆಂಟ್ ಓಟು ತೆಗೆದುಕೊಂಡವರು ನಾವು ಇಲ್ಲಿ ಬಂದುಕುಳಿತಿದ್ದೇವೆ.

(ಗೊಂದಲ)

ಶ್ರೀ ಎಸ್.ಆರ್. ಲಕ್ಷ್ಮಯ್ಯ: ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದವರು. ಸಭಾಪತಿಯವರು ಕೆ.ಸಿ.ಪಿ.ಯಿಂದ ಗೆದ್ದು ಬಂದವರು. ಇವರು ಇವತ್ತು ಹೇಳುತ್ತಾರೆ. ಸರ್ಕಾರ ಅದು ಮಾಡಲಿಲ್ಲ ಇದು ಮಾಡಲಿಲ್ಲ ಅಂತ.

(ಗೊಂದಲ)

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೇ, ಒಂದು ಮಾತನ್ನು ನಾನು ಸ್ಪಷ್ಟವಾಗಿಹೇಳಬಯಸುತ್ತೇನೆ. ಮಾನ್ಯ ಶಿಕ್ಷಣ ಸಚಿವರ ಕಾರ್ಯಕ್ರಮವನ್ನು ನಾವು ಮೆಚ್ಚಬೇಕಾಗುತ್ತದೆ. ಮಾನ್ಯ ಶಿಕ್ಷಣ ಸಚಿವರು ಬಹಳಷ್ಟು ಸಾಧನೆ ಮಾಡಿದ್ದಾರೆ ಈ ಒಂದು ಇಲಾಖೆಯಲ್ಲಿ ಮಾಡಿದ

ಸಾಧನೆ ತೃಪ್ತಿಕರ ಎಂದು ಹೇಳದಿದ್ದರೂ ಕೂಡ ತೃಪ್ತಿಕರವಾಗಿದೆ ಎನ್ನುವ ಮಾತನ್ನು ನಾನು ಹೇಳಲುಬಯಸುತ್ತೇನೆ. ಅವರು ಶಾಲಾ ಶಿಕ್ಷಕರನ್ನು ನೇಮಕ ಮಾಡುವ ಬಗ್ಗೆ ಕೂಡ ನಾನು ಅವರನ್ನು ಪ್ರಶಂಸಿದ್ದೇನೆ. ಕಳೆದವಿಧಾನ ಸಬೆಯಲ್ಲಿ ನಾನು ಪಿ.ಯು.ಸಿ. ಮೌಲ್ಯಮಾಪನ ಮರುಮೌಲ್ಯಮಾಪನ ಮಾಡಬೇಕೆನ್ನುವ ಬಗ್ಗೆ ಒಂದು ಖಾಸಗಿ ನಿರ್ಣಯವನ್ನು ಮಂಡನೆ ಮಾಡಲು ನಾನು ಪ್ರಯತ್ನಿಸಿದ್ದೆ ಈಗ ಅವರೇ ಅದನ್ನು ತರುತ್ತಾರೆ ಎಂದು ಆದರೆ ಅದು ನಿಜವಾಗಿಯೂ ಒಂದು ಒಳ್ಳೆಯ ಸೂಚನೆಯನ್ನು ಕೊಡುತ್ತಿದೆ. ಸಹಸ್ರಾರು ಮಂದಿ ಪಿ.ಯು.ಸಿ. ವಿದ್ಯಾರ್ಥಿಗಳು ಯಾರು ಇದ್ದಾರೆ ಮರುಮೌಲ್ಯಮಾಪನದಿಂದ ಆಗತಕ್ಕಂಥ ಹಾನಿಯಿಂದ ಪಾರು ಮಾಡಲಿಕ್ಕೆ ಮುಂದಿನ ವರ್ಷದಿಂದ ತಾವು ಮರುಮೌಲ್ಯಮಾಪನದ ವ್ಯವಸ್ಥೆ ಮಾಡಿದರೆ ಎಷ್ಟೋ ಜನ ವಿದ್ಯಾರ್ಥಿಗಳ ಜೀವವನ್ನು ತಾವು ಉಳಿಸುತ್ತೀರಿ ಎನ್ನುವ ಮಾತನ್ನು ನಾನು ಹೇಳಲು ಇಷ್ಟಪಟುತ್ತೇನೆ. ನಾನು ಒಂದು ಮಾತು ಹೇಳುವುದಾದರೆ ನಮ್ಮ ಕ್ರೀಡಾಸಚಿವರಲ್ಲಿ ನಾನು ಒಂದು ವಿನಂತಿಯನ್ನು ಮಾಡುತ್ತಿದ್ದೇನೆ. ತಾಲ್ಲೂಕು ಕ್ರೀಡಾಂಗಣವನ್ನು ಮಾಡುತ್ತಿದ್ದಾರೆ. ನಮ್ಮ ಉಡುಪಿ ತಾಲ್ಲೂಕಿನಲ್ಲಿ ಕೂಡ ತಾಲ್ಲೂಕು ಕ್ರೀಡಾಂಗಣ ಮಾಡಬೇಕೆಂದು 10 ಲಕ್ಷ ರೂಪಾಯಿ ಮಂಜೂರಾತಿ ಆಗಿದೆ. ಆದಕ್ಕೆ ನಾನು ಏನು ಮಾಡಿದೆ 10 ಲಕ್ಷರೂಪಾಯಿಗಳಲ್ಲಿ ಏನೂ ಆಗುವುದಿಲ್ಲ ನಗರದ ಎಲ್ಲರ ಕಡೆಯಿಂದ ದೇಣಿಗೆ ಕೊಡಿಸುತ್ತೇನೆ ಒಂದು ಜಿಲ್ಲಾ ಮಟ್ಟದ ಕ್ರೀಡಾಂಗಣ ನಿರ್ಮಾಣ ಆಗುವ ಪರಿಸ್ಥಿತಿ ನಿರ್ಮಾಣ ಮಾಡುವಾಗ ದೊಡ್ಡ ಕ್ರೀಡಾಂಗಣ ಆಗಬೇಕೆಂದು ಒಂದು ಕೋಟಿ 25 ಲಕ್ಷರೂಪಾಯಿಗಳಿಗೆ ಒಂದು ಪ್ರಾಜೆಕ್ಟ್ ಮಾಡಿ ಮಣಿಪಾಲಿನ ಪೈ ಬಂಧುಗಳೊಂದಿಗೆ ಟಿಎಂಎಪೈ ಸ್ಮಾರಕ ದಿವಂಗತ ಮಾದವ ಪೈಗಳ ಸ್ಟೇಡಿಯಂ ಮಾಡೋಣ ಮುಕ್ಕಾಲು ಅಂಶದ ದೇಣಿಗೆಯನ್ನು ನೀವೇಕೊಟ್ಟು ಬಿಡಿ ನಮ್ಮಜಿಲ್ಲೆಗೆ ಒಂದು ದೊಡ್ಡ ಸ್ಟೇಯಿಂ ಬರುತ್ತದೆಂದು ಹೇಳಿದಾಗ ಅವರು ಒಪ್ಪಿಕೊಂಡರು 75 ಲಕ್ಷರೂಪಾಯಿಗಳನ್ನು ಕೊಡುವ ಬಗ್ಗೆ ಕೂಡ ಒಪ್ಪಿಗೆ ಆಯಿತು ಪೌಂಡೇಷನ್ ಸ್ಟೋನ್ ಸಹ ಹಾಕಲು ನಿಗದಿ ಮಾಡಿತು. ಇನ್‌ವಿಟೇಷನ್ ಸಹ ಪ್ರಿಂಟ್ ಆಯಿತು. ಅದನ್ನು ಎಲ್ಲಾ ಕಾಲೇಜುಗಳಿಗೂ ಸಹ ತಾವು ಇನ್‌ರಿಟೇಷನ್ ಕೊಟ್ಟಮೇಲೆ ಏಕಾಏಕಿಯಾಗಿ ಅಸಿಸ್ಟೆಂಟ್ ಕಮೀಷನರ್ ಆ ಕಾರ್ಯಕ್ರಮವನ್ನು ರದ್ದುಮಾಡಿದ್ದಾರೆಂದು ಪತ್ರಿಕೆಗಳಲ್ಲಿ ಬಂತು. ಆ ಕಾರ್ಯಕ್ರಮ ರದ್ದಾಯಿತು. ಅಲ್ಲೂ ರಾಜಕೀಯ ಬಂತು. ಇದು ನಿಮ್ಮ ಸರ್ಕಾರದ ನೀತಿ. 75 ಲಕ್ಷ ರೂಪಾಯಿಗಳು ನೀವು ಕೊಡುವ ಯೋಗ್ಯತೆ ಇಲ್ಲ. ಇವತ್ತು ಕೇವಲ 10 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಈಗ ಒಂದು ವರ್ಷ ಆಯಿತು ಸ್ಟೇಡಿಯಂ ಕಮಿಟಿ ಮೀಟಿಂಗ್ ಆಗಿ ಕಡೆಗೆ ನಮ್ಮ ಜಿಲ್ಲಾಮಂತ್ರಿಗಳು ಹೋಗಿ ಆ ಕಾರ್ಯಕ್ರಮವನ್ನು ರದ್ದು ಮಾಡಿದರು. ಇಲ್ಲಿ ಅದು ಆಗುವುದಿಲ್ಲ ಎಂದು ಹೇಳಿ. ಒಂದು ಸಂದೇಶ ಕೊಟ್ಟರು. ಅದನ್ನು ಪೋಸ್ಟ್‌ಪೋನ್ ಮಾಡಿದರು. ಅವರು ಈಗ ಮಂತ್ರಿಗಳ ಆದೇಶಕ್ಕಾಗಿ

ಕಾಯುತ್ತಿದ್ದಾರೆ. ಈಗ ಕೊಟ್ಟಿರುವ 10 ಲಕ್ಷ ರೂ.ನಲ್ಲಿ ಫೌಂಡೇಷನ್‌ಸ್ಟೋನ್ ಹಾಕುವುದಕ್ಕೆ ಆಗುತ್ತದೆಯೇ? ನಾನು ಕೇಳಿದರೆ ಅದಕ್ಕೆ ನೀವು ಸರಿ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ನಾನು ಸರಿ ಮಾಡಿಕೊಳ್ಳಬೇಕಂತೆ. ಸಾರ್ವಜನಿಕರಿಂದ ಬರತಕ್ಕಂತ ದೇಣಿಗೆ ಹಣ ಅಲ್ಲಿ ಬಾರದಿದ್ದಹಾಗೆ ಮಾಡಿದ್ದಾರೆ.

ಶ್ರೀ ಅಜಯಕುಮಾರ್ ಸರ್ ನಾಯಕ್: ಮಾನ್ಯ ಅಧ್ಯಕ್ಷರೇ, ಉಡುಪಿ ಕ್ರೀಡಾಂಗಣದ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು. 75 ಲಕ್ಷ ರೂಪಾಯಿಗಳನ್ನು ಪೈ ಸಂಸ್ಥೆಯವರು ಕೊಡಲಿಕ್ಕೆ ಮುಂದೆ ಬಂದಿದ್ದಾರೆಂದು. ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಯಾವುದೂ ಬಂದಿದ್ದು ಇಲ್ಲ ಅವರು ಏನು 75 ಲಕ್ಷ ರೂಪಾಯಿ ದೇಣಿಗೆ ಕೊಡುತ್ತಾರೆ, ಅದನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ಸಿದ್ಧವಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ಡಿಪಾಜಿಟ್ ತೆಗೆದುಕೊಂಡು ಇಟ್ಟುಕೊಂಡು ಅದನ್ನು ಇನ್ನೊಂದು ಬ್ಯಾಂಕ್‌ನಲ್ಲಿ ಇಟ್ಟು ದರ ಬಡ್ಡಿಯನ್ನು ತೆಗೆದುಕೊಂಡು ಬೇರೆ ಕೆಲಸ ಮಾಡಬೇಡಿ. ಅದಕ್ಕೆ ತಾವು ಏನಾದರೂ ಒಂದು ಕಮಿಟಿ ಮಾಡಿ ಯಾರು ಹೆಚ್ಚು ಹಣ ಕೊಡುತ್ತಾರೋ ಅವರಿಗೆ ಅಧ್ಯಕ್ಷರನ್ನಾಗಿ ಮಾಡಿ ನಿಮ್ಮ ಇಲಾಖಾ ವತಿಯಿಂದ ಸದಸ್ಯರನ್ನು ಮಾಡಿ ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಸೇರಿಸಿ ಮಾಡಿದರೆ ಒಂದು ತರಹ ಆಗುತ್ತದೆ. ದೇಣಿಗೆ ಕೊಟ್ಟವರ ಹೆಸರು ಇಡುತ್ತೇವೆ ಆ ಕೆಲಸ ಮಾಡಿಸುತ್ತೇವೆ ಎಂದು ಹೇಳಿದರೆ ಈಗ ಜನ ಮುಂದೆ ಬರುತ್ತಾರೆ. 75 ಲಕ್ಷ ರೂ. ಹಣ ಅವರು ಕೊಡುವುದು 25 ಲಕ್ಷ ಹಣ ನೀವು ಇಡುವುದು ಆ ದುಡ್ಡು ನಿಮ್ಮಲ್ಲಿ, ಈ ಕಡೆ ಸ್ಟೇಡಿಯಂ ಆಗಿಲ್ಲ ಅಂದರೆ ಜನರು ಮುಂದೆ ಬರುವುದಿಲ್ಲ.

ಶ್ರೀ ಅಜಯಕುಮಾರ್ ಸರ್‌ನಾಯಕ್: ಮಾನ್ಯ ಅಧ್ಯಕ್ಷರೇ, ಜಿಲ್ಲಾ ಮಟ್ಟದಲ್ಲಿ ಕ್ರೀಡಾಂಗಣಗಳು ಏನು ಇವೆ ಅಲ್ಲಿ ಅದಕ್ಕೆ ಜಿಲ್ಲಾಧ್ಯಕ್ಷರು ಛೇರ್ಮನರು ಇದ್ದಾರೆ. ತಾಲ್ಲೂಕು ಮಟ್ಟದ ಕ್ರೀಡಾಂಗಣಗಳಿಗೆ ಅಸಿಸ್ಟೆಂಟ್ ಕಮೀಷನರ್ ಛೇರ್ಮನ್‌ರು ಇರುತ್ತಾರೆ. ಅವರ ಅಧ್ಯಕ್ಷತೆಯಲ್ಲಿ ಕ್ರೀಡಾಂಗಣಗಳ ಕೆಲಸಕಾರ್ಯಗಳು ನಡೆಯುತ್ತಿವೆ.

ಶ್ರೀ ಯು.ಆರ್. ಸಭಾಪತಿ: ಮಾನ್ಯ ಅದ್ಯಕ್ಷರೇ, ಅಸಿಸ್ಟೆಂಟ್ ಕಮೀಷನರ್ ಅಧ್ಯಕ್ಷತೆಯಲ್ಲಿ ಇರುವಂತಹ ಸಮಿತಿ ಅಂದು ನಾವೆಲ್ಲಾ ಕುಳಿತುಕೊಂಡು ನಿರ್ಣಯ ಮಾಡಿದೆವು. ಆದಿನ ಅಸಿಸ್ಟೆಂಟ್ ಕಮೀಷನರ್ ಇದ್ದರು ಡಿವೈಎಸ್‌ಪಿ ಇದ್ದರು ತಹಸೀಲ್ದಾರ್‌ರವರು ಇದ್ದರು ನಾವೆಲ್ಲ ಕುಳಿತು ತೀರ್ಮಾನ ಮಾಡಿ ಫೌಂಡೇಶನ್‌ಸ್ಟೋನ್ ಹಾಕಬೇಕೆಂದು, ಆದರೆ ಈ ತೀರ್ಮಾನ ರದ್ದು ಮಾಡಿದ್ದು ಏಕೆ? ಯಾರು ಹೇಳಿದರು? ಏತಕ್ಕೆ ರದ್ದು ಮಾಡಿದರು.

ಶ್ರೀ ಯು.ಆರ್. ಸಭಾಪತಿ: ನಾನು ಆ ದಿವಸ ಪರ್ಸನಲ್ ಆಗಿ ನಾನೇ ಬಂದು ಹೇಳಿದ್ದೇನೊ. ಈ ರೀತಿ ನಡೆದಿದೆ ನಮಗೆ ಅನ್ಯಾಯ ಆಗಿದೆ ನ್ಯಾಯ ಒದಗಿಸಿಕೊಡಿ ಎಂದು ಕೇಳಿದ್ದೇನೆ.

ಶ್ರೀ ಅಜಯಕುಮಾರ ಸರ್‌ನಾಯಕ್: ಮಾನ್ಯ ಅಧ್ಯಕ್ಷರೇ, 75 ಲಕ್ಷ ರೂ. ದೇಣಿಗೆ ಕೊಡುತ್ತೇವೆಂದು ಹೇಳಿದರೆ ನಾವು ತೆಗೆದುಕೊಂಡು ಕ್ರೀಡಾಂಗಣ ಕಟ್ಟುವುದಿಲ್ಲ ಎಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಯು.ಆರ್. ಸಭಾಪತಿ: ನನ್ನಬಳಿ ಎಲ್ಲಾ ದಾಖಲೆಗಳು ಇವೆ. ನಾನು ತಂದು ಕೊಡುತ್ತೇನೆ.

ಉಪಾಧ್ಯಕ್ಷರು: ಈಗ ಅವರು ಹೇಳುತ್ತಿದ್ದಾರೆ ದುಡ್ಡು ಕೊಟ್ಟರೆ ನಾವು ಮಾಡುವುದಕ್ಕೆ ತಯಾರಾಗಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಯು.ಆರ್. ಸಭಾಪತಿ: ಮತ್ತೆ ಆ ಸಚಿವರು ಅಡ್ಡ ಬರಲಿಕ್ಕೆ ಇಲ್ಲವಲ್ಲಾ. ಮತ್ತೆ ಅವರು ಬಂದು ನಾನು ಕೊಜೆಂಟ್ರಿಕ್ಸ್‌ನಿಂದ ತೆಗೆದುಕೊಂಡು ಬರುತ್ತೇನೆ, ಎಂಆರ್‌ಪಿಎಲ್‌ನಿಂದ ತೆಗೆದುಕೊಂಡು ಬರುತ್ತೇನೆ ಅದನ್ನು ಮಾಡಿ ಎಂದು ಹೇಳಿದರೆ ನಾಳೆ ನೀವು ಅದನ್ನು ಮಾಡುತ್ತೀರಾ? ಆ ರೀತಿ ಇದ್ದರೆ ಅದನ್ನು ಹೇಳಿಬಿಡಿ ಇಲ್ಲಿ. ಕೊನೆಯದಾಗಿ ಮಾನ್ಯ ಅಧ್ಯಕ್ಷರೇ, ನಾನು ಒಂದು ಮಹತ್ವವಾದ ವಿಚಾರವನ್ನು ಹೇಳಬಯಸುತ್ತೇನೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯನ್ನು, ವಿಭಾಗ ಮಾಡಿ ಉಡುಪಿ ಜಿಲ್ಲೆಯನ್ನಾಗಿ ಮಾಡಬೇಕೆನ್ನುವಂತಹ ಮಾತು ಇದರ ಬಗ್ಗೆ ಹುಂಡೇಕರ್ ಸಮಿತಿ ಮತ್ತು ಇತರೇ ಎಲ್ಲಾ ಸಮಿತಿಗಳಲ್ಲಿ ಕೂಡ ಶಿಫಾರಸ್ಸು ಮಾಡಿದ್ದಾರೆ. ಉಡುಪಿಯನ್ನು ಜಿಲ್ಲೆಯನ್ನಾಗಿ ಮಾಡಬೇಕೆನ್ನುವ ನಮ್ಮ ಒಂದು ಮನವಿ ಏನು ಇದೆ ಮತ್ತು ವರದಿ ಏನು ಇದೆ ಅದನ್ನು ಅನುಷ್ಠಾನಕ್ಕೆ ತರಬೇಕೆನ್ನುವ ಕಳಕಳಿಯನ್ನು ನಾನು ಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಕಳೆದ ತಿಂಗಳು ಜನವರಿ ಪ್ರಥಮ ವಾರದಲ್ಲಿ ಎಲ್ಲಾ ಪಕ್ಷದವವನ್ನು ಕರೆದು ಒಂದು ಸಭೆ ಮಾಡಿದರು. ಎಲ್ಲಾ ಎಂಟು ಜಿಲ್ಲೆಗಳಲ್ಲಿ ಬಹುತೇಕ ಎಲ್ಲಾ ಬಿಜೆಪಿ ಜನತಾದಳ ಕಾಂಗ್ರೆಸ್ಸಿಗರು ಎಲ್ಲರೂ ಸೇರಿಕೊಂಡು ಪಾರ್ಲಿಮೆಂಟ್ ಸದಸ್ಯರುಗಳೂ ಸಹ ಆ ದಿನ ಸಭೆಗೆ ಬಂದಿದ್ದರು. ಉಡುಪಿ ಜಿಲ್ಲೆ ಆಗುವ ಬಗ್ಗೆ ಒಮ್ಮತದ ತೀರ್ಮಾನವನ್ನು ನಾವು ಆ ಸಭೆಯಲ್ಲಿ ಹೇಳಿದ್ದೇವೆ. ನಮಗೆ ಬಹಳ ಆಸೆ ಇತ್ತು. ಗಣರಾಜ್ಯದಿನದಂದು ಮಾನ್ಯ ಮುಖ್ಯಮಂತ್ರಿಗಳು ಜಿಲ್ಲೆಗಳ ಘೋಷಣೆ ಮಾಡುತ್ತಾರೆಂದು ಬಹ ಆಸೆಯಿಂದ ಇದ್ದೆವು. ಆಗ ಸಹ ಅವರು ಮಾಡಲಿಲ್ಲ. ಇವತ್ತು ಮಾನ್ಯ ರಾಜ್ಯಪಾಲರ ಭಾಷಣ ಏನು ಇದೆ ಅವರಲ್ಲಿಯೂ ಕೂಡ ಅವರು ಸ್ಪಷ್ಟವಾಗಿ ಎಲ್ಲೂ ಹೇಳಲಿಲ್ಲ. 8 ಜಿಲ್ಲೆಗಳನ್ನು ಮಾಡುತ್ತೇವೆ ಎನ್ನುವಂತಹ ಮಾತನ್ನು ಅವರು ಎಲ್ಲೂ ಹೇಳಲಿಲ್ಲ. ಈ ಜಿಲ್ಲೆಗಳನ್ನು

ಮಾಡುವಾಗ ಈ ವಿಚಾರವನ್ನು ಸರ್ಕಾರ ಕೈ ಬಿಟ್ಟಿದೆಯೋ ಅಥವಾ ಮಾಡುತ್ತೇವೆಂದು ಹೇಳುತ್ತೀರೋ ಹೇಗೆ? ಆದ್ದರಿಂದ ನಾನು ಈ ಸರ್ಕಾರವನ್ನು ಕಳಕಳಿಯಿಂದ ವಿನಂತಿಸುವುದು ಏನೆಂದರೆ ನಿಮ್ಮ ಕಾಲದಲ್ಲಿ ಜನತಾದಳ ಸರ್ಕಾರ ಅಧಿಕಾರದಲ್ಲಿ ಇದ್ದಾಗ ರಾಜ್ಯದ ಇತಿಹಾಸದಲ್ಲಿ 8 ಜಿಲ್ಲೆಗಳನ್ನು ಮಾಡಿದ್ದು ಇದ್ದರೆ ಅದೊಂದು ಚರಿತ್ರೆ. ಆ ಒಂದು ಚರಿತ್ರೆಯನ್ನು ನೀವು ನಿರ್ಮಾಣ ಮಾಡುತ್ತೀರಿ, ಮಾನ್ಯ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲ್ ಅವರ ಕಾಲದಲ್ಲಿ ಒಂದು ಚರಿತ್ರೆಯನ್ನು ನಿರ್ಮಾಣ ಮಾಡುತ್ತಾರೆ ಎಂದು ನಂಬಿ ಆ 8 ಜಿಲ್ಲೆಗಳಲ್ಲಿ ಉಡುಪಿ ಜಿಲ್ಲೆ ಹಸಿತ ಅವರು ತಮ್ಮ ಬಜೆಟ್ ಅಧಿವೇಶನದಲ್ಲಿ ಆದರೂ ಸಹ ಘೋಷಣೆ ಮಾಡಲಿ ಎಂದು ಹೇಳಿಕೊನೆಯದಾಗಿ ನಾವು ವಿರೋಧಪಕ್ಷದವರು ಎರಡು ದಿವಸ ಮೂರು ದಿವಸ ಮಾತನಾಡಿ ಕೊನೆಗೆ ಮಾನ್ಯಮುಖ್ಯಮಂತ್ರಿಗಳು ಕೊನೆಯಲ್ಲಿ ಕೇವಲ 15 ನಿಮಿಷಗಳಲ್ಲಿ ತ್ರೇತಾಯುಗ ದ್ವಾಪರಯುಗ ವಿಶ್ವಾಮಿತ್ರ ಮೇನಕೆ ಜವಹರಲಾಲ್ ನೆಹರು ಎಲ್ಲಾ ತಂದುಬಿಟ್ಟು ಕೇವಲ 15 ನಿಮಿಷದಲ್ಲಿ ಅವರ ಭಾಷಣವನ್ನು ಮುಕ್ತಾಯ ಮಾಡದೆ ಮಾನ್ಯ ಸದಸ್ಯರು ಎತ್ತಿದಂತಹ ಪ್ರಶ್ನೆಗಳಿಗೆ ನಿರ್ದಿಷ್ಟವಾದ ಉತ್ತರವನ್ನು ಅವರು ಕೊಡಲಿ ಇನ್ನುಮುಂದೆ ಅವರು ಟಿ.ವಿ.ಯಲ್ಲಿ ಕೊಟ್ಟ ಸಂದರ್ಶನವನ್ನು ಇನ್ನು ಎಲ್ಲಿಯೂ ರಿಪಿಟ್ ಮಾಡುವುದು ಬೇಡ ಎಂದು ಹೇಳಿ ಅವರನ್ನು ಕೇಳಿಕೊಂಡು ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಸದನವನ್ನು 10-00 ಗಂಟೆವರೆಗೆ ಮುಂದೂಡುತ್ತಿದೇನೆ.

(ಸದನವು 6-20 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಸಭೆಯು ಗುರುವಾರ 1997ರ ಫೆಬ್ರವರಿ ತಿಂಗಳು 10-00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು).

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.